ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಜನವರಿ 10, 2025

ಸಂಪುಟ : 51 ಸಂಚಿಕೆ : 238 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com



## ಕಸ ಮುಕ್ತ ನಗರವನ್ನಾಗಿಸಲು ಕ್ರಿಯಾಯೋಜನೆ ತಯಾರಿಸುವಂತೆ ಸಂಸದೆ ಡಾ. ಪ್ರಭಾ ನಿರ್ದೇಶನ

### ಜೆ.ಎಚ್. ಪಟೇಲ್ ಬಡಾವಣೆಯಲ್ಲಿ ಸ್ವಚ್ಛ ಗೃಹ ಕಲಿಕಾ ಕೇಂದ್ರದ ಉದ್ಘಾಟನೆ

ದಾವಣಗೆರೆ, ಜ. 9- ದಾವಣಗೆರೆಯನ್ನು ಕಸ ಮುಕ್ತ ನಗರವನ್ನಾಗಿಸುವ ಸಂಬಂಧ ಕ್ರಿಯಾಯೋಜನೆ ತಯಾರಿಸುವಂತೆ ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಮಹಾನಗರ ಪಾಲಿಕೆಗೆ ನಿರ್ದೇಶನ ನೀಡಿದರು.

ಇಲ್ಲಿನ ಜೆ.ಎಚ್. ಪಟೇಲ್ ಬಡಾವಣೆಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಸ್ವಚ್ಛ ಗೃಹ ಕಲಿಕಾ ಕೇಂದ್ರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದಾವಣಗೆರೆಯಲ್ಲಿ ನಿರ್ಮಾಣಗೊಂಡಿರುವ ಈ ಕೇಂದ್ರ ದೇಶದಲ್ಲಿಯೇ ಮೂರನೇಯದಾಗಿದೆ. ಆಂಧ್ರಪ್ರದೇಶ ಹಾಗೂ ಬೆಂಗಳೂರಿನ ನಂತರ ದಾವಣಗೆರೆಯಲ್ಲಿ ನಿರ್ಮಾಣವಾಗಿರುವುದು ಹೆಗ್ಗಳಿಕೆಯಾಗಿದೆ ಎಂದು ಅವರು ಹೇಳಿದರು.

ಧೂಳು ಮುಕ್ತ ನಗರ ನಿರ್ಮಾಣ ನಿಟ್ಟಿನಲ್ಲಿ ಈಗಾಗಲೇ ಎಲ್ಲೆಡೆ ಸಿಮೆಂಟ್ ರಸ್ತೆಗಳಾಗಿವೆ. ಇನ್ನು ಕಸ ಸಂಗ್ರಹ ಹಾಗೂ ವಿಲೇವಾರಿ ತುಂಬಾ ಚೆನ್ನಾಗಿ ಆಗುತ್ತಿದೆ. ಇದರ ಜೊತೆಗೆ ಕಸವನ್ನು ರಸ ಮಾಡುವ ಪ್ರಕ್ರಿಯೆ ಆರಂಭವಾಗಿದೆ. ಆವರಗೊಳ್ಳದಲ್ಲಿ 200 ಟಿಪಿಡಿ ಸಾಮರ್ಥ್ಯದ ಕಸ ವಿಲೇವಾರಿ ಘಟಕ ನಿರ್ಮಾಣ ಮಾಡಲಾಗಿದ್ದು, ಇಲ್ಲಿ ಗೊಬ್ಬರ ತಯಾರು ಮಾಡಿ ರೈತರಿಗೆ ಕೊಡುವ ಸಿದ್ಧತೆ ನಡೆಯುತ್ತಿದೆ ಎಂದು ಸಂಸದರು ತಿಳಿಸಿದರು.

ಮನೆ, ಸಂಘ - ಸಂಸ್ಥೆಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕಸ ವಿಲೇವಾರಿಗೆ ಮಾರ್ಗಸೂಚಿ ತಯಾರಿಸಬೇಕು. ಪ್ರತಿ ಮನೆಯಲ್ಲಿ ಗೊಬ್ಬರ ತಯಾರು ಮಾಡಬೇಕು. ಹೀಗೆ ತಯಾರಿಸಿದ ಗೊಬ್ಬರ ಕೈತೋಟಕ್ಕೆ ಬಳಕೆ ಆಗಬೇಕು. ಸ್ವಯಂ ಸೇವಕರು, ಹೋಟೆಲ್ ಮಾಲೀಕರನ್ನು ಕರೆಯಿಸಿ ತ್ಯಾಜ್ಯದಿಂದ ಗೊಬ್ಬರ ತಯಾರು ಮಾಡುವ ಕುರಿತು ತರಬೇತಿ ನೀಡಬೇಕು ಎಂದು ಅವರು ಸಲಹೆ ನೀಡಿದರು.

ಈ ಕೇಂದ್ರ ಪ್ರವಾಸಿ ತಾಣವಾಗುವುದು ಬೇಡ. ಇದನ್ನು ತರಬೇತಿಗೆ ಬಳಕೆ ಮಾಡಬೇಕು. ಸಂಘ - ಸಂಸ್ಥೆಗಳ ಪದಾಧಿಕಾರಿಗಳು, ಶಾಲಾ- ಕಾಲೇಜು ವಿದ್ಯಾರ್ಥಿಗಳಿಗೆ ತರಬೇತಿ ನೀಡಬೇಕು. ಇಲ್ಲಿ ಹಲವು ವಿಧದ ಗೊಬ್ಬರ ತಯಾರಿಕಾ ಘಟಕಗಳಿವೆ. ಆಸಕ್ತರು ತಮ್ಮ ಅಗತ್ಯಕ್ಕೆ ಅನು ಗುಣವಾಗಿ ಘಟಕ ಪಡೆಯಬಹುದು. ಇಬ್ಬರು ತರಬೇತಿ ನೀಡುವ ಸಿಬ್ಬಂದಿಯನ್ನು ಇಲ್ಲಿ ನಿಯೋಜಿಸಬೇಕು ಎಂದು ಸೂಚಿಸಿದರು.

ನಗರದಲ್ಲಿ ನಿತ್ಯ 190 ಟನ್ ಕಸ ಸಂಗ್ರಹವಾಗುತ್ತಿದೆ. ಈ ಪೈಕಿ 90 ಟನ್ ಹಸಿ ಕಸ ಸಿಗುತ್ತಿದೆ. ಇದು ಭೂಮಿ ಸೇರುತ್ತಿದ್ದು, ಇದನ್ನು ಗೊಬ್ಬರ ಮಾಡಲು ಸಾಕಷ್ಟು ಅವಕಾಶ ಇದೆ. ಈ ಅವಕಾಶವನ್ನು ಪ್ರತಿಯೊಬ್ಬರೂ ಸರಿಯಾಗಿ ಉಪಯೋಗಿಸಿಕೊಂಡರೆ ಸ್ವಚ್ಛ ನಗರಗಳ ಪಟ್ಟಿಯಲ್ಲಿ ದಾವಣಗೆರೆ 5ರೊಳಗೆ ಸ್ಥಾನ ಪಡೆಯಬಹುದಾಗಿದೆ. ಇದೀಗ ದಾವಣಗೆರೆ ನಗರ ಸ್ವಚ್ಛತೆಯಲ್ಲಿ ದೇಶದಲ್ಲಿ 169 ಮತ್ತು ರಾಜ್ಯದಲ್ಲಿ 4 ನೇ ಸ್ಥಾನ (2ನೇ ಪುಟಕ್ಕೆ)

## ನೇರ ಬ್ರಿಡ್ಜ್ ನಿರ್ಮಾಣಕ್ಕೆ ಗ್ರಾಮಸ್ಥರ ಆಗ್ರಹ

### ಹಳೇ ಕುಂದುವಾಡದಲ್ಲಿ ರಸ್ತೆ ತಡೆದು ಪ್ರತಿಭಟನೆ : ಬಂಧನ - ಬಿಡುಗಡೆ



ದಾವಣಗೆರೆ, ಜ.9- ಹಳೇ ಕುಂದುವಾಡ-ಬನ್ನಿಕೋಡು ಮಾರ್ಗಕ್ಕೆ ನೇರ ಬ್ರಿಡ್ಜ್ ನಿರ್ಮಿಸುವಂತೆ ಆಗ್ರಹಿಸಿ ಹಳೇ ಕುಂದುವಾಡ ಗ್ರಾಮಸ್ಥರು, ಅಲ್ಲಿನ ರಾಷ್ಟ್ರೀಯ ಹೆದ್ದಾರಿ ಬಳಿ ರಸ್ತೆ ಬಂದ್‌ಗೊಳಿಸಿ ಗುರುವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರು ರಸ್ತೆಯಲ್ಲೇ ಕೂತು ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು. ಸ್ಥಳಕ್ಕೆ ಧಾವಿಸಿದ ಎಸಿ ಹಾಗೂ ತಹಶೀಲ್ದಾರ್ ಗ್ರಾಮಸ್ಥರನ್ನು ಸಮಾಧಾನ ಪಡಿಸುವಲ್ಲಿ ವಿಫಲರಾದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರು, ಈ ಮೊದಲು ಇಲ್ಲಿದ್ದ ಎರಡೂ ಬ್ರಿಡ್ಜ್‌ಗಳನ್ನು ಅವೈಜ್ಞಾನಿಕವಾಗಿ ಮಾಡಿದ್ದರು. ಪ್ರಸ್ತುತ 2 ಬ್ರಿಡ್ಜ್‌ಗಳನ್ನು ಒಡೆದು, ಈಗ ಮತ್ತೆ ಅವೈಜ್ಞಾನಿಕವಾಗಿ ಬ್ರಿಡ್ಜ್ ನಿರ್ಮಾಣ ಮಾಡುತ್ತಿರುವುದು ಸರಿಯಲ್ಲ ಎಂದು ಎಚ್ಚರಿಕೆ ನೀಡಿದರು.

ಹರಿಹರ-ಶಿವಮೊಗ್ಗ ರಾಜ್ಯ ಹೆದ್ದಾರಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆ ಇದಾಗಿದೆ. ಆದ್ದರಿಂದ ಹಳೇ ಕುಂದುವಾಡದಿಂದ ಬನ್ನಿಕೋಡಿಗೆ ಹೋಗುವ ಈ ಸ್ಥಳದಲ್ಲಿ 80ಅಡಿ ನೇರ ಬ್ರಿಡ್ಜ್ ನಿರ್ಮಾಣ ಮಾಡಬೇಕು ಎಂದು ಒತ್ತಾಯಿಸಿದರು. ಇದೇ ಸಂದರ್ಭದಲ್ಲಿ ಎಸಿ, ತಹಶೀಲ್ದಾರ್ ಗ್ರಾಮಸ್ಥರ ನಡುವೆ ವಾಗ್ವಾದ ನಡೆಯಿತು. ಅಧಿಕಾರಿಗಳ ಮಾತಿಗೆ ಬಗ್ಗದ ಗ್ರಾಮಸ್ಥರು ಬ್ರಿಡ್ಜ್ ನಿರ್ಮಾಣ ಆಗಲೇಬೇಕು ಎಂದು ಪಟ್ಟು ಹಿಡಿದು ಕೂತರು.

ಸ್ಥಳಕ್ಕೆ ಎಎಸ್ಪಿ ವಿಜಯಕುಮಾರ್ ಸಂತೋಷ್ ಹಾಗೂ ಡಿವೈಎಸ್ಪಿ ಮಲ್ಲೇಶ್ ದೊಡ್ಮನಿ ಆಗಮಿಸಿ ಪ್ರತಿಭಟನೆ ಹತ್ತಿಕ್ಕಲು ಗ್ರಾಮದ 50ಕ್ಕೂ ಅಧಿಕ ಮುಖಂಡರನ್ನು ವಶಕ್ಕೆ ಪಡೆದು, ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಮಾಜಿ ಮೇಯರ್ ಹೆಚ್.ಎನ್. ಗುರುನಾಥ್, ಎಪಿಎಂಸಿ ಮಾಜಿ ಅಧ್ಯಕ್ಷ ಹೆಚ್.ಜಿ. ಗಣೇಶಪ್ಪ, ಮುಖಂಡರಾದ ಜೆ. ಮಾರುತಿ, ಹೆಚ್.ಜಿ. (4ನೇ ಪುಟಕ್ಕೆ)

## ಸೌಹಾರ್ದ ಸಹಕಾರಿಗಳ ಒಕ್ಕೂಟದ ಜಿಲ್ಲಾಧ್ಯಕ್ಷರಾಗಿ ಎಸ್.ಟಿ. ವೀರೇಶ್ ಆಯ್ಕೆ




ದಾವಣಗೆರೆ, ಜ.9- ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾಗಿ ಮಾಜಿ ಮೇಯರ್ ಎಸ್.ಟಿ. ವೀರೇಶ್ ಹಾಗೂ ಉಪಾಧ್ಯಕ್ಷರಾಗಿ ರುದ್ರೇಗೌಡರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅಧ್ಯಕ್ಷರಾಗಿ ಆಯ್ಕೆಯಾದ ವೀರೇಶ್ ಮಾತನಾಡಿ, ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟಕ್ಕೆ (2ನೇ ಪುಟಕ್ಕೆ)

## ಶರಣಾಗತರಾದ ನಕ್ಸಲರಿಗೆ ನ್ಯಾಯಾಂಗ ಬಂಧನ

ಬೆಂಗಳೂರು, ಜ.9- ಶಸ್ತ್ರಾಸ್ತ್ರ ತ್ಯಜಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮುಂದೆ ಶರಣಾಗಿದ್ದ ನಕ್ಸಲ್ ನಾಯಕರಾದ ಮುಂಡಗಾರು ಲತಾ, ಸುಂದರಿ ಕೊತ್ತೂರು, ವನಜಾಕ್ಷಿ ಬಾಳೆಹೊಳೆ, ಜಿಶಾ, ವಸಂತ್ ಟಿ.ಎನ್, ಮಾರೆಪ್ಪ ಅರೋಲಿ ಅವರಿಗೆ ಎನ್ಐಎ ವಿಶೇಷ ಕೋರ್ಟ್ ಜನವರಿ 30ರವರೆಗೆ ನ್ಯಾಯಾಂಗ ಬಂಧನಕ್ಕೆ ಕಳುಹಿಸಿದೆ.

ಚಿಕ್ಕಮಗಳೂರು ಡಿವೈಎಸ್‌ಪಿ ಬಾಲಾಜಿ ಸಿಂಗ್ ಅವರು ನಕ್ಸಲ್ (2ನೇ ಪುಟಕ್ಕೆ)


### ಎರಡನೇ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀಮತಿ ಪವಿತ್ರ (ಶೋಭಾ)**

ನಿಧನ : 10-01-2023

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು. ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ...

ತಾಯಿ : ಶ್ರೀಮತಿ ದುರುಗಮ್ಮ ದಿ|| ರಾಟೆ ಸೋಮಪ್ಪ
ಅಕ್ಕಂದಿರು : ಶ್ರೀಮತಿ ನೇತ್ರಾವತಿ, ಶ್ರೀಮತಿ ಸಾವಿತ್ರಮ್ಮ
ಮಾವಂದಿರು : ದೇವೇಂದ್ರಪ್ಪ, ಮಹಾದೇವಪ್ಪ
ತಮ್ಮ : ತಿಪ್ಪೇರುದ್ರಪ್ಪ, ಶ್ರೀಮತಿ ಭಾವನ
ಅಣ್ಣ : ಕೊಟ್ರೇಶ್, ಶ್ರೀಮತಿ ರೇಖಾ
ಹಾಗೂ ಕಿವುಡಪ್ಪನರ ವಂಶಸ್ಥರು, ಸಾರಥಿ, ಹರಿಹರ ತಾಲ್ಲೂಕು




# ಶಾಸಕರ ಪ್ರಚಾರದ ಉತ್ಸವವಾದ ಸಮ್ಮೇಳನ

## ಸಮ್ಮೇಳನಕ್ಕೆ ಮಾಜಿ ಶಾಸಕರಿಗೂ ಆಹ್ವಾನವಿಲ್ಲ: ರಾಜೇಶ್ ಅಸಮಾಧಾನ



ಜಗಳೂರು, ಜ.9- ಇದೇ ಜ.11 ಮತ್ತು 12 ರಂದು ಪಟ್ಟಣದಲ್ಲಿ ನಡೆಯಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಹಾಗೂ 13 ರಂದು ನಡೆಯಲಿರುವ 'ಜಗಳೂರು ಜಲೋತ್ಸವ' ಶಾಸಕ ಬಿ. ದೇವೇಂದ್ರಪ್ಪ ಅವರ ಪ್ರಚಾರದ ಉತ್ಸವವಾಗಿದೆ ಎಂದು ಮಾಜಿ ಶಾಸಕ ಎಚ್. ಪಿ.ರಾಜೇಶ್ ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಶಾಸಕ ಎಸ್.ವಿ.ರಾಮಚಂದ್ರ ನಿವಾಸದಲ್ಲಿ ಬುಧವಾರ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಥಳೀಯ ಜನಪದ ವಿದ್ವಾಂಸರು, ಜನಪದ ತಜ್ಞರು, ಸಾಹಿತಿಗಳನ್ನು ಕರೆದಿಲ್ಲ ಎಂದು ಪತ್ರಿಕೆಗಳಲ್ಲಿ ಓದಿದ್ದೇನೆ. ಹಿರಿಯ ಸಾಹಿತಿಗಳನ್ನೇ ಸಮ್ಮೇಳನಕ್ಕೆ ಆಹ್ವಾನಿಸಿಲ್ಲ. ಮಾಜಿ ಶಾಸಕನಾದ ನನ್ನನ್ನೇ ಆಹ್ವಾನಿಸಿಲ್ಲ. ತಾಲ್ಲೂಕು ಕಸಾಪ ಅಧ್ಯಕ್ಷರು ದೂರವಾಣಿ ಮೂಲಕ ಆಹ್ವಾನಿಸಿದ್ದಾರೆ. ಇದನ್ನೆಲ್ಲಾ ನೋಡಿದರೆ ಏನೂ ಸರಿಯಿಲ್ಲ ಎನಿಸುತ್ತಿದೆ ಎಂದರು.

ಸಾಹಿತ್ಯ ಸಮ್ಮೇಳನಕ್ಕೆ ಹಣ ಸಂಗ್ರಹಣಾ ವಿಷಯದಲ್ಲಿ ಶಿಕ್ಷಕರು, ಅಧಿಕಾರಿಗಳಿಂದ ಇಂತಿಷ್ಟು ಹಣ ಕೊಡಲೇ ಬೇಕು ಎಂದು ನಿಗದಿ ಮಾಡಿದ್ದಾರೆ. ಇದು ಶಾಸಕರಾದವರಿಗೆ, ಸಾಹಿತ್ಯ ಸಮ್ಮೇಳನಕ್ಕೆ ಶೋಭೆ ತರುವ ವಿಷಯವಲ್ಲ. ದೇಣಿಗೆ ತೆಗೆದುಕೊಳ್ಳಲಿ ಆದರೆ ಎಲ್ಲರನ್ನೂ ಕೇಳಲಿ. ಕನ್ನಡ ತೇರು ಎಳೆಯಲು ನಾವೆಲ್ಲ ಇದ್ದೇವೆ. ಸೌಜನ್ಯಕ್ಕಾದರೂ ಕರೆಯಬಹುದಿತ್ತು. ಸಮ್ಮೇಳನ, ಜಲೋತ್ಸವಕ್ಕೆ ನಮ್ಮ ಪಕ್ಷದವರು, ಮುಖಂಡರ ವಿರೋಧವಿಲ್ಲ. ಆದರೆ ರಿಪಬ್ಲಿಕ್ ಆಫ್ ಜಗಳೂರಿನಂತೆ ವರ್ತಿಸುತ್ತಿರುವುದು ಸರಿಯಲ್ಲ. ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಹೆಸರಿನಲ್ಲಿ ಶಾಸಕರು ಸರ್ವಾಧಿಕಾರಿ ಧೋರಣೆ ತೋರುತ್ತಿದ್ದಾರೆ. ಇದಕ್ಕೆ ನಮ್ಮ ವಿರೋಧವಿದೆ ಎಂದರು.

**ನನ್ನನ್ನು ಕರೆದಿಲ್ಲ ಹಾಗಾಗಿ ಉದ್ಘಾಟನೆಗೆ ಬರಲ್ಲ. ಕನ್ನಡದ ತೇರು ಎಳೆಯಲು ಬರುತ್ತೇನೆ ಎಂದು ಎಚ್.ಪಿ.ರಾಜೇಶ್ ಹೇಳಿದರೆ, ಮಾಜಿ ಶಾಸಕ ಎಸ್.ವಿ. ರಾಮಚಂದ್ರ ನನ್ನನ್ನು ಶಾಸಕರು ದೂರವಾಣಿ ಮೂಲಕ ಕರೆದಿದ್ದಾರೆ ಉದ್ಘಾಟನೆಗೆ ಹೋಗುತ್ತೇನೆ ಎಂದರು. ನನ್ನನ್ನು ಜಲೋತ್ಸವಕ್ಕೆ ಕರೆದಿಲ್ಲ. ನಮ್ಮ ಉದ್ದೇಶ ಜಗಳೂರಿಗೆ ನೀರು ಹರಿದರೆ ಸಾಕು ಎಂಬುದು ನಮ್ಮ ಉದ್ದೇಶವಾಗಿತ್ತು. ಕನ್ನಡ ಸಾಹಿತ್ಯ ಸಮ್ಮೇಳನ ಚನ್ನಾಗಿ ನಡೆಯಲಿ ಎಂದು ಹೇಳಿದರು.**

ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ನಮಗೂ ಸಂತೋಷವಿದೆ. ಆದರೆ ನಡೆಯುತ್ತಿರುವ ಬೆಳವಣಿಗೆಗಳನ್ನು ಗಮನಿಸಿದರೆ ನಮಗೆ ಅಸಮಾಧಾನವಿದೆ. ಸಾಹಿತ್ಯ ಸಮ್ಮೇಳನದ ನೆಪದಲ್ಲಿ ವ್ಯಕ್ತಿಯನ್ನು ವೈಭವೀಕರಿಸುವುದು ಒಳ್ಳೆಯದಲ್ಲ. ಮೂರು ಜನ ಮಾಜಿ ಶಾಸಕರಿದ್ದೇವೆ. ಸೌಜನ್ಯಕ್ಕೂ ಮಾತನಾಡಿಸಿಲ್ಲ. ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಎಂದು ದೂರಿದರು.

**ಪರಿಷತ್ ಅಧ್ಯಕ್ಷರು ನೆಪ ಮಾತ್ರ:** ಜಿಲ್ಲಾ ಕಸಾಪ ಅಧ್ಯಕ್ಷ ವಾಮದೇವಪ್ಪ ಅವರು ನೆಪ ಮಾತ್ರ. ಎಲ್ಲಾ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿರುವುದು ಶಾಸಕ ದೇವೇಂದ್ರಪ್ಪ ಅವರು. ನಮ್ಮ ಕ್ಷೇತ್ರದಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಶುದ್ಧ ಕುಡಿಯುವ ನೀರಿನ ಘಟಕಗಳು ಕೆಟ್ಟು ಹೋಗಿವೆ. ರಸ್ತೆಗಳು ಅಭಿವೃದ್ಧಿಯಾಗಿಲ್ಲ. ಮೂಲ ಸೌಕರ್ಯಗಳು ಇಲ್ಲದೇ ಜನ ಬಳಲುತ್ತಿದ್ದಾರೆ. ಆದರೆ ಜಲೋತ್ಸವದ ನೆಪದಲ್ಲಿ ಹಣ ವಸೂಲಿ ಮಾಡಿ ವೈಭವೀಕರಿಸುವುದು ಎಷ್ಟು ಸರಿ? ಎಂದು ಪ್ರಶ್ನೆ ಮಾಡಿದರು.

57 ಕೆರೆ ತುಂಬಿಸುವ ಯೋಜನೆ ನಮ್ಮ ಅವಧಿಯಲ್ಲಿ ಅನುಷ್ಠಾನಕ್ಕೆ ಬಂತು. ರಾಮಚಂದ್ರ ಅವಧಿಯಲ್ಲಿ 650 ಕೋಟಿ ಹಣ ಬಿಡುಗಡೆಯಾಯಿತು. ಆದರೆ ಜಲೋತ್ಸವಕ್ಕೆ ಕಾರಣೀಭೂತರಾದ ನಮ್ಮನ್ನೇ ಕರೆದಿಲ್ಲ. ಸಿರಿಗೆರೆ ಶ್ರೀಗಳನ್ನು ಕರೆಯಬಹುದಿತ್ತು. ಅದರ ಬಗ್ಗೆ ನಮಗೆ ಮಾಹಿತಿಯೇ ಇಲ್ಲ ಎಂದರು.

**ಶಾಸಕರದ್ದು ಏನೂ ನಡೆಯಲ್ಲ:** ಶಾಸಕರ ಬದಲಾಗಿ ಅವರ ಮಗ ಎಂ.ಡಿ. ಕೀರ್ತಿಕುಮಾರ್ ಆಡಳಿತ ನಡೆಸುತ್ತಿದ್ದಾರೆ. ಶಾಸಕರ ಬದಲು ಶ್ಯಾಡೋ ಶಾಸಕನಂತೆ ಮಗ ಕೆಲಸ ಮಾಡುತ್ತಿದ್ದಾರೆ. ಮೊದಲು ರಿಪಬ್ಲಿಕ್ ಆಫ್ ಬಳ್ಳಾರಿ ಎನ್ನುತ್ತಿದ್ದರು. ಈಗ ರಿಪಬ್ಲಿಕ್ ಆಫ್ ಜಗಳೂರು ಆಗುತ್ತಿದೆ.

ವೈಯಕ್ತಿಕ ಪ್ರಚಾರಕ್ಕೆ ಸಾಹಿತ್ಯ ಸಮ್ಮೇಳನ, ಜಲೋತ್ಸವ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಸಾರ್ವಜನಿಕ ಹಣದಲ್ಲಿ ಕಲಾವಿದರಿಗೆ ಮ್ಯೂಸಿಕಲ್ ನೈಟ್‌ಗಾಗಿ ಲಕ್ಷಾಂತರೂ ಖರ್ಚು ಮಾಡುತ್ತಿದ್ದಾರೆ. ಇದು ಯಾರ ಹಣ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಎಚ್.ಸಿ.ಮಹೇಶ್, ಜಿಪಂ ಮಾಜಿ ಅಧ್ಯಕ್ಷ ಸೊಕ್ಕೆ ನಾಗರಾಜ್ ಸೇರಿದಂತೆ ಅನೇಕ ಮುಖಂಡರು ಇದ್ದರು.

# ರಾಜನಹಳ್ಳಿ ಮಠದಲ್ಲಿ ಫೆ.8-9 ರಂದು ವಾಲ್ಮೀಕಿ ಜಾತ್ರೆ



ಮಲೇಬೆನ್ನೂರು, ಜ.9- ರಾಜನಹಳ್ಳಿ ಮಹರ್ಷಿ ವಾಲ್ಮೀಕಿ ಗುರುಪೀಠದಲ್ಲಿ ಬರುವ ಫೆಬ್ರವರಿ 8 ಮತ್ತು 9 ರಂದು 7 ನೇ ವರ್ಷದ ವಾಲ್ಮೀಕಿ ಜಾತ್ರೆಯನ್ನು ಬಹಳ ವಿಶೇಷವಾಗಿ ಹಮ್ಮಿಕೊಳ್ಳಲಾಗಿದೆ ಎಂದು ಜಾತ್ರಾ ಸಮಿತಿ ಅಧ್ಯಕ್ಷರೂ ಆದ ಜಗಳೂರಿನ ಶಾಸಕ ಬಿ.ದೇವೇಂದ್ರಪ್ಪ ತಿಳಿಸಿದರು.

ಶ್ರೀಮಠದಲ್ಲಿ ಗುರುವಾರ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಮಠದ 27ನೇ ವಾರ್ಷಿಕೋತ್ಸವ, ಲಿಂಗೈಕ್ಯ ಪುಣ್ಯಾನಂದಪುರಿ ಶ್ರೀಗಳವರವರ 18ನೇ ಪುಣ್ಯಾರಾಧನೆ, ಶ್ರೀ ಪ್ರಸನ್ನಾನಂದ ಸ್ವಾಮೀಜಿ ಅವರ 17ನೇ ವರ್ಷದ ಪಟ್ಟಾಧಿಕಾರ ಮಹೋತ್ಸವ ಕಾರ್ಯಕ್ರಮಗಳನ್ನು ಒಳಗೊಂಡ ಈ ಜಾತ್ರೆ ವೈಚಾರಿಕ ಜಾತ್ರೆಯಾಗಿ ನಡೆಯಲಿದೆ ಎಂದರು.

ಫೆಬ್ರವರಿ 8 ರ ಶನಿವಾರ ಬೆಳಿಗ್ಗೆ 8 ಗಂಟೆಯಿಂದ ವಾಲ್ಮೀಕಿ ಭಾವಚಿತ್ರದ ಮೆರವಣಿಗೆ, 8-30 ಕ್ಕೆ ವಾಲ್ಮೀಕಿ ಧ್ವಜಾರೋಹಣ, 9 ಗಂಟೆಗೆ ಸರ್ವಧರ್ಮ ಸಾಮೂಹಿಕ ವಿವಾಹ ಮಹೋತ್ಸವದ ಬಳಿಕ ಉದ್ಯೋಗ, ಕೃಷಿ ಮೇಳ ಉದ್ಘಾಟನೆಗೊಳ್ಳಲಿದೆ. 11-30 ಕ್ಕೆ ಮಹಿಳಾ ಗೋಷ್ಠಿ, ಮಧ್ಯಾಹ್ನ 2-30 ಕ್ಕೆ ನೌಕರರ ಗೋಷ್ಠಿ ಹಾಗೂ ಸಾಧಕರಿಗೆ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ನಡೆಯಲಿದ್ದು, ಸಂಜೆ 6 ರಿಂದ ಸಂಘಟನಾ ಗೋಷ್ಠಿ ಮತ್ತು ರಾತ್ರಿ 8 ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ರಾತ್ರಿ 10 ರಿಂದ ವಾಲ್ಮೀಕಿ ವಿರಚಿತ 'ಸಂಪೂರ್ಣ ರಾಮಾಯಣ' ನಾಟಕ ಪ್ರದರ್ಶನವಿದೆ ಎಂದರು.

ಫೆಬ್ರವರಿ 9 ರ ಭಾನುವಾರ ಬೆಳಿಗ್ಗೆ 6ಕ್ಕೆ ಸ್ವಚ್ಛತಾ ಕಾರ್ಯ, 7 ರಿಂದ 8.30 ರವರೆಗೆ ಭಕ್ತರಿಗೆ ಗುರುಗಳ ದರ್ಶನ, 9ಕ್ಕೆ ನಾಡಿನ ಮಠಾಧೀಶರ ಸಮ್ಮುಖದಲ್ಲಿ ವಾಲ್ಮೀಕಿ ರಥೋತ್ಸವ, 9.30 ರಿಂದ ಧರ್ಮಸಭೆ, ಮಧ್ಯಾಹ್ನ 12.30 ಕ್ಕೆ ಬೃಹತ್ ಜನಜಾಗೃತಿ ಸಮಾವೇಶ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸುವರು.

ಜಾತ್ರಾ ಸಮಿತಿಯ ಸಂಚಾಲಕರನ್ನಾಗಿ ಬಿಜೆಪಿ ಮುಖಂಡ ಶ್ರೀನಿವಾಸ ದಾಸಕರಿಯಪ್ಪ ಅವರನ್ನು ಆಯ್ಕೆ ಮಾಡಿರುವುದಾಗಿ ಅವರು ಅವರು ಈ ವೇಳೆ ಪ್ರಕಟಿಸಿದರು.

**ದಲಿತರಿಗೆ ಸಿಎಂ ಸ್ಥಾನ ಸಿಗಲಿ :** ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಮುಖ್ಯಮಂತ್ರಿ ಮಾಡುವ ಆಗ್ರಹ ಈ ಬಾರಿಯ ಜಾತ್ರೆಯಲ್ಲಿ ಕೇಳಬರಲಿದೆಯೇ ? ಎಂಬ ಪತ್ರಕರ್ತರ ಪ್ರಶ್ನೆಗೆ, ದಲಿತ ವರ್ಗದವರನ್ನು ಸಿಎಂ ಮಾಡಬೇಕೆಂಬ ಚರ್ಚೆ ಇದೆ. ಸತೀಶ್ ಜಾರಕಿಹೊಳಿ ಅವರನ್ನು ಸಿಎಂ ಮಾಡಿದರೆ ನಾವು ಖುಷಿ ಪಡುತ್ತೇವೆ, ಸಿಎಂ ಮಾಡುವ ತೀರ್ಮಾನವನ್ನು ಹೈಕಮಾಂಡ್ ನಿರ್ಧರಿಸುತ್ತದೆ ಎಂದು ಶಾಸಕ ದೇವೇಂದ್ರಪ್ಪ ಪ್ರತಿಕ್ರಿಯಿಸಿದರು.

ಇದೇ ವೇಳೆ ಜಗಳೂರಿನಲ್ಲಿ ಜ.11 ಮತ್ತು 12 ರಂದು ನಡೆಯಲಿರುವ ದಾವಣಗೆರೆ ಜಿಲ್ಲಾ 14 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ ಡಾ. ಎ.ಬಿ. ರಾಮಚಂದ್ರಪ್ಪ ಅವರನ್ನು ಶ್ರೀಗಳು ಸನ್ಮಾನಿಸಿ, ಗೌರವಿಸಿದರು.

ಮಠದ ಪೀಠಾಧಿಪತಿ ಡಾ. ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಮುಖಂಡರಾದ ಹೊದಿಗೆರೆ ರಮೇಶ್, ಕೆ.ಪಿ.ಪಾಲಯ್ಯ, ಪಾಲಿಕೆ ಮಾಜಿ ಮೇಯರ್ ವಿನಾಯಕ ಪೈಲ್ವಾನ್, ಮಠದ ಧರ್ಮದರ್ಶಿಗಳಾದ ಡಾ. ಜಿ. ರಂಗಯ್ಯ, ಬಿ. ವೀರಣ್ಣ, ನಲವಾಗಲು ನಾಗರಾಜಪ್ಪ, ಹೊಸಪೇಟೆ ಜಂಬಯ್ಯ ನಾಯಕ, ಹಾಸನದ ಮಹೇಶ, ಚಿತ್ರದುರ್ಗದ ತಿಪ್ಪೇಸ್ವಾಮಿ, ಲಿಂಗನಾಯಕನಹಳ್ಳಿ ತಿಪ್ಪೇಸ್ವಾಮಿ, ಹರಿಹರದ ಕೆ.ಬಿ.ಮಂಜಣ್ಣ, ಮುಖಂಡರಾದ ಜಿಗಳಿಯ ಜಿ. ಆನಂದಪ್ಪ, ಕೆ. ಆರ್. ರಂಗಪ್ಪ, ಜಿ. ಆರ್. ನಾಗರಾಜ್, ಕೊಕ್ಕನೂರು ಸೋಮಶೇಖರ್, ಹರಪನಹಳ್ಳಿಯ ಹೆಚ್.ಕೆ. ಹಾಲೇಶ್, ಹುಚ್ಚೆಂಗೆಪ್ಪ, ಮಹಿಳಾ ಮುಖಂಡರಾದ ವಿಜಯಶ್ರೀ ಮಹೇಂದ್ರಕುಮಾರ್, ಪಾರ್ವತಿ ಬೋರಯ್ಯ, ಜಿಲ್ಲಾ ವಾಲ್ಮೀಕಿ ಯುವ ಘಟಕದ ಅಧ್ಯಕ್ಷ ತೋಟದ ಬಸವರಾಜ್, ಶಾಮನೂರು ಪ್ರವೀಣ್, ಫಣಿಯಾಪುರ ಲಿಂಗರಾಜ್, ಜಿಗಳಿ ಪ್ರಕಾಶ್ ಸೇರಿದಂತೆ ಇನ್ನೂ ಅನೇಕರು ಹಾಜರಿದ್ದರು.

# ಜಿಲ್ಲಾಧ್ಯಕ್ಷರಾಗಿ ಎಸ್.ಟಿ. ವೀರೇಶ್



**(1ನೇ ಪುಟದಿಂದ)** ತನ್ನದೇ ಆದ ಮಹತ್ವ ಮತ್ತು ಹಿನ್ನೆಲೆ ಇದೆ. ಸಹಕಾರಿಗಳ ಹಿತ ಕಾಪಾಡಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ಯಾರಿಗೂ ಚ್ಯುತಿ ಬರದಂತೆ ಕೆಲಸ ಮಾಡುತ್ತೇನೆ ಎಂದು ಹೇಳಿದರು.

ಸಹಕಾರ ಕ್ಷೇತ್ರದ ವ್ಯಾಪ್ತಿ ದೊಡ್ಡದು. ಸಹಕಾರಿಗಳ ಹಿತ ಕಾಪಾಡಬೇಕಾದ ಅವಶ್ಯಕತೆ ಇದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಹಕಾರ ಕ್ಷೇತ್ರಕ್ಕೆ ನೆರವು ನೀಡುತ್ತಿವೆ. ಇದು ಸದ್ಬಳಕೆಯಾಗಬೇಕು. ಈ ನಿಟ್ಟಿನಲ್ಲಿ ಅಧ್ಯಕ್ಷನಾಗಿ ಉತ್ತಮ ಕೆಲಸ ಮಾಡಲು, ಸಹಕಾರಿಗಳ ಬದುಕು ಹಸನಾಗಿಸಲು ದುಡಿಯುತ್ತೇನೆ. ನನ್ನ ಮೇಲೆ ಇಟ್ಟಿರುವ ವಿಶ್ವಾಸ ಉಳಿಸಿಕೊಳ್ಳುತ್ತೇನೆ ಎಂದು ವೀರೇಶ್ ತಿಳಿಸಿದರು.

ಈ ವೇಳೆ ಸಹಕಾರಿ ಭಾರತಿ ರಾಜ್ಯಾಧ್ಯಕ್ಷ ಮಾಗನೂರು ಪ್ರಭುದೇವ, ಕರಾವಳಿ ಸಹಕಾರಿ ಅಧ್ಯಕ್ಷ ಉಮೇಶ್ ಶೆಟ್ರು, ಮನಿ ಪ್ಲ್ಯಾಂಟ್ ಸೌಹಾರ್ದ ಸಹಕಾರಿಯ ನಾಗರಾಜ್, ಜಿಎಂ ಸೌಹಾರ್ದ ಸಹಕಾರಿಯ ಎ.ಸಿ. ಬಸವರಾಜ್, ಸನ್ಮತಿ ಸಹಕಾರಿಯ ಪಾಲಾಕ್ಷಪ್ಪ, ಆಂಜನೇಯ ಸೌಹಾರ್ದ ಸಹಕಾರಿಯ ಚಂದ್ರಶೇಖರ್, ದಾನಮ್ಮ ಸೌಹಾರ್ದ ಸಹಕಾರಿಯ ರಾಜು ಮತ್ತಿತರರು ಇದ್ದರು.

# ಹರಿಹರ : ಶ್ರೀ ವಿಠ್ಠಲ ರುಕ್ಮಿಣಿ ದೇವಸ್ಥಾನದಲ್ಲಿಂದು ರುದ್ರಾಭಿಷೇಕ

ನಾಮದೇವ ಶಿಂಪಿ ಕಲ್ಯಾಣ ಮಂಟಪದ ಆವರಣದಲ್ಲಿರುವ ಶ್ರೀ ವಿಠ್ಠಲ ರುಕ್ಮಿಣಿ ದೇವಸ್ಥಾನದಲ್ಲಿ ವೈಕುಂಠ ಏಕಾದಶಿ ಅಂಗವಾಗಿ ಇಂದು ಶುಕ್ರವಾರ ಬೆಳಗ್ಗೆ ಶ್ರೀ ವಿಠ್ಠಲ ರುಕ್ಮಿಣಿ ದೇವರಿಗೆ ಮಹಾ ರುದ್ರಾಭಿಷೇಕ, ನಂತರ 10 ಗಂಟೆಗೆ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ, ತುಳಸಿ ಅರ್ಚನೆ, ಮಹಾಮಂಗಳಾರತಿ ಸೇರಿದಂತೆ ವಿಶೇಷ ಪೂಜಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನ ಸಮಿತಿಯ ಶಂಕರ್ ಖಟಾವ್ಕರ್ ತಿಳಿಸಿದ್ದಾರೆ.

# ರಂಗನಾಟಕ ರಚನಾ ಶಿಬಿರಕ್ಕೆ ಅರ್ಜಿ

ದಾವಣಗೆರೆ, ಜ.9- ಕರ್ನಾಟಕ ನಾಟಕ ಅಕಾಡೆಮಿ ಹಾಗೂ ವೃತ್ತಿ ರಂಗಭೂಮಿ ರಂಗಾಯಣದ ಸಹಯೋಗದಲ್ಲಿ 5 ದಿನಗಳ ಕಾಲ ನಡೆಯುವ ರಾಜ್ಯಮಟ್ಟದ 'ವೃತ್ತಿ ರಂಗ ನಾಟಕ ರಚನಾ ಶಿಬಿರ'ಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಇದೇ ದಿನಾಂಕ 20ರೊಳಗೆ ದಾವಣಗೆರೆಯ ವೃತ್ತಿ ರಂಗಭೂಮಿ ರಂಗಾಯಣಕ್ಕೆ ಅರ್ಜಿ ಸಲ್ಲಿಸಬಹುದು. ವಿವರಕ್ಕೆ ಸಂಪರ್ಕಿಸಿ : 9341010712.

# ಕ್ರಿಯಾಯೋಜನೆ ತಯಾರಿಸುವಂತೆ ಸಂಸದೆ ನಿರ್ದೇಶನ



**(1ನೇ ಪುಟದಿಂದ)** ಇದೆ. ಖಾಲಿ ನಿವೇಶನದಲ್ಲಿ ಕಸ ಹಾಕುವುದು ತಪ್ಪಬೇಕು. ಕಸ ವಿಲೇವಾರಿಗೆ ಎಲ್ಲರೂ ಕೈಜೋಡಿಸಬೇಕು ಎಂದು ಡಾ. ಪ್ರಭಾ ಅವರು ಕೇಳಿಕೊಂಡರು.

ಮಹಾನಗರ ಪಾಲಿಕೆ ಮಹಾಪೌರರಾದ ಕೆ.ಚಮನ್ ಸಾಬ್ ಮಾತನಾಡಿ, ದಾವಣಗೆರೆಯ ಲ್ಯಾಂಡ್ ಮಾರ್ಕ್‌ಗಳಲ್ಲಿ ಸ್ವಚ್ಛ ಕಲಿಕಾ ಕೇಂದ್ರವೂ ಒಂದು. ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರ ಪ್ರೋತ್ಸಾಹದಿಂದ ಇದು ಕಾರ್ಯರೂಪಕ್ಕೆ ಬಂದಿದೆ. ನಗರಾಭಿವೃದ್ಧಿಯ ಪರಿಣಾಮ ಇಂದು ಭೂಮಿ ಬೆಲೆ ಏರಿಕೆ ಆಗಿದೆ. ಆಶ್ರಯ ಮನೆಗಳ ಕ್ರಾಂತಿ ಆಗಿದೆ. ಕುಡಿಯುವ ನೀರಿಗೆ ಬ್ಯಾರೇಜ್ ನಿರ್ಮಾಣ ಆಗಿದೆ. ಶಾಮನೂರು ಶಿವಶಂಕರಪ್ಪ ಹಾಗೂ ಎಸ್‌ಎಸ್.ಮಲ್ಲಿಕಾರ್ಜುನ್ ಅವರ ದೂರದೃಷ್ಟಿ ಅಭಿವೃದ್ಧಿಗೆ ಪೂರಕವಾಗಿದೆ. ಇದರೊಟ್ಟಿಗೆ ದಾವಣಗೆರೆ ಲೋಕಸಭಾ ಕ್ಷೇತ್ರದ ಸಮಸ್ಯೆಗಳು ಇಪ್ಪತ್ತು ವರ್ಷಗಳಿಂದ ಇದ್ದವು. ಪ್ರಭಾ ಮಲ್ಲಿಕಾರ್ಜುನ್ ಅವರು ಈ ಬಗ್ಗೆ ಲೋಕಸಭೆಯಲ್ಲಿ ಧ್ವನಿ ಎತ್ತುತ್ತಿದ್ದಾರೆ ಎಂದು ಹೇಳಿದರು.

ನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ಮಾತನಾಡಿ, ಆಜಾದ್, ಬಾಷಾ ನಗರ ಸೇರಿ ಹಲವೆಡೆ ಕಸ ನಿರ್ವಹಣೆ ಸರಿಯಾಗಿ ಆಗುತ್ತಿಲ್ಲ. ಇಂಥಹ ಬಡಾವಣೆಗಳನ್ನು ಗಮನದಲ್ಲಿ ಇಟ್ಟುಕೊಂಡು ಸ್ಥಳೀಯ ಪಾಲಿಕೆ ಸದಸ್ಯರ ಸಹಕಾರದಿಂದ ಇಡೀ ನಗರವನ್ನು ಸಂಪೂರ್ಣ ಸ್ವಚ್ಛ ಮಾಡುವ ಚಿಂತನೆ ಇಟ್ಟುಕೊಳ್ಳಲಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಉಪ ಮೇಯರ್ ಸೋಗಿ ಶಾಂತಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷರುಗಳಾದ ಸವಿತಾ ಗಣೇಶ್ ಹುಲ್ಮನಿ, ಶ್ರೀಮತಿ ಆಶಾ, ಸುಧಾ ಮಂಜುನಾಥ್ ಇಟ್ಟಿಗುಡಿ, ಸದಸ್ಯರುಗಳಾದ ಗಡಿಗುಡಾಳ್ ಮಂಜುನಾಥ್, ಎಲ್.ಎಂ.ಸಾಗರ್, ಕಾಂಗ್ರೆಸ್ ಮುಖಂಡ ಗೌಡಪ್ಪ ಕಲ್ಲೇಶ್, ಪಾಲಿಕೆ ನಾಮನಿರ್ದೇಶನ ಸದಸ್ಯ ಕಲ್ಲಳ್ಳಿ ರುದ್ರೇಶ್, ಎಸ್.ಜಿ.ಹನುಮಂತಪ್ಪ, ಅಣ್ಣಯ್ಯ ಇತರರು ಉಪಸ್ಥಿತರಿದ್ದರು.

# ಶ್ರೀರಂಗಪಟ್ಟಣ-ಅರಸೀಕೆರೆ ಹೆದ್ದಾರಿ ಮೇಲ್ದರ್ಜೆಗೆ ಕೇಂದ್ರ ಸಚಿವರ ಒಪ್ಪಿಗೆ

ಬೆಂಗಳೂರು,ಜ.9- ಐತಿಹಾಸಿಕ ಪ್ರವಾಸಿ ತಾಣ ಶ್ರೀರಂಗಪಟ್ಟಣ-ಅರಸೀಕೆರೆ ನಡುವಿನ ರಾಜ್ಯ ಹೆದ್ದಾರಿ 7 ಅನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸುವ ಯೋಜನೆಗೆ ಕೇಂದ್ರ ಹೆದ್ದಾರಿ ಮತ್ತು ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಒಪ್ಪಿಗೆ ನೀಡಿದ್ದಾರೆ. ಕೆ.ಆರ್.ಪೇಟೆ ಶಾಸಕ ಹೆಚ್.ಟಿ.ಮಂಜುನಾಥ್ ಮನವಿ ಮೇರೆಗೆ ಗಡ್ಕರಿ ಅವರನ್ನು ನವದೆಹಲಿಯಲ್ಲಿ ಭೇಟಿಯಾದ, ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್. ಡಿ.ಕುಮಾರಸ್ವಾಮಿ, ಯೋಜನೆಗಳ ಬಗ್ಗೆ ವಿಸ್ತೃತ ಚರ್ಚೆ ನಡೆಸಿದರು. ಶ್ರೀರಂಗಪಟ್ಟಣ, ಕೆ.ಆರ್.ಪೇಟೆ ಪಾಂಡವಪುರ, ಚನ್ನರಾಯಪಟ್ಟಣ, ಅರಸೀಕೆರೆ ನಡುವಿನ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸಬೇಕು ಎಂದು ಮನವಿ ಮಾಡಲಾಗಿತ್ತು.

ರಾಜ್ಯ ಹೆದ್ದಾರಿ ತಾಲ್ಲೂಕು ಕೇಂದ್ರಗಳನ್ನು ನಗರಗಳಿಗೆ ಸಂಪರ್ಕಿಸುವ ಪ್ರಮುಖ ಕೊಂಡಿಯಾಗಿದೆ, ಆರ್ಥಿಕವಾಗಿ ದೊಡ್ಡ ಕೊಡುಗೆ ನೀಡಲಿದೆ, ಮುಖ್ಯವಾಗಿ ಈ ಭಾಗದಲ್ಲಿ ಪ್ರವಾಸೋದ್ಯಮ, ಕೃಷಿ, ಕೈಗಾರಿಕಾ ಕ್ಷೇತ್ರಗಳಿಗೆ ಹೆಚ್ಚು ಅನುಕೂಲ ಆಗಲಿದೆ ಎಂಬುದನ್ನು ನಿತಿನ್ ಗಡ್ಕರಿ ಅವರಿಗೆ ಮನವರಿಕೆ ಮಾಡಿಕೊಡಲಾಯಿತು.

ಯೋಜನೆಗೆ ಒಪ್ಪಿಗೆ ನೀಡಿದ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಹಾಗೂ ಒಪ್ಪಿಗೆ ಪಡೆಯುವಲ್ಲಿ ಶ್ರಮವಹಿಸಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೂ ಕೆ.ಆರ್.ಪೇಟೆ ಶಾಸಕ ಹೆಚ್.ಟಿ. ಮಂಜುನಾಥ್ ಕೃತಜ್ಞತೆ ಸಲ್ಲಿಸಿದ್ದಾರೆ.

# ರಾಣೇಬೆನ್ನೂರು : ಬಸ್ ಪ್ರಯಾಣ ದರ ಹೆಚ್ಚಳ ವಿರೋಧಿಸಿ ಜೆಡಿಎಸ್ ಪ್ರತಿಭಟನೆ



ರಾಣೇಬೆನ್ನೂರು,ಜ.9- ರಾಜ್ಯ ಕಾಂಗ್ರೆಸ್ ಸರ್ಕಾರ ಶೇಕಡ 15 ರಷ್ಟು ಬಸ್ ದರ ಹೆಚ್ಚಿಗೆ ಮಾಡಿದ್ದನ್ನು ರದ್ದು ಮಾಡಬೇಕು. ಮೊದಲಿನ ದರ ನಿಗದಿಗೊಳಿಸಿ ರಾಜ್ಯದ ಜನರಿಗೆ ಆಗುವ ಹೊರೆಯನ್ನು ಕಡಿಮೆಗೊಳಿಸಬೇಕು ಎಂದು ಇಲ್ಲಿನ ಜೆಡಿಎಸ್ ಘಟಕದ ಕಾರ್ಯಕರ್ತರು ಪ್ರತಿಭಟನೆ ಮಾಡಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ಗ್ಯಾರಂಟಿ ಯೋಜನೆಗಳಿಂದ ರಾಜ್ಯ ಸರ್ಕಾರ ದಿವಾಳಿಯಾಗಿದ್ದು. ವಿದ್ಯುತ್, ನೀರು, ಬಸ್, ಕಂದಾಯ ಹೀಗೆ ಎಲ್ಲ ಹಂತಗಳಲ್ಲೂ ದರ ಹೆಚ್ಚಳ ಮಾಡಿ ಜನ ಸಾಮಾನ್ಯರಿಗೆ ಆರ್ಥಿಕ ತೊಂದರೆ ಉಂಟು ಮಾಡಿ, ಆ ಮೂಲಕ ಗ್ಯಾರಂಟಿಗಳನ್ನು ಅನುಷ್ಠಾನ ಮಾಡುತ್ತಿರುವ ಸರ್ಕಾರದ ನೀತಿ ಖಂಡನೀಯ ಎಂದು ಜಿಲ್ಲಾ ಜೆಡಿಎಸ್ ಅಧ್ಯಕ್ಷ ಮಂಜುನಾಥೇಶ್ವರ ಗೌಡಶಿವಣ್ಣನವರ ಹೇಳಿದರು.

ಪಕ್ಷದ ಮಾಧ್ಯಮ ವಕ್ತಾರ ಮಹೇಶಗೌಡ, ಯುವ ಅಧ್ಯಕ್ಷ ವಿಠಲ್ ಸುಣಗಾರ, ಕಾರ್ಮಿಕ ಅಧ್ಯಕ್ಷ ಮೌನೇಶ ಮನ್ವಾಚಾರಿ, ದಾವಲ ಮಲ್ಲೀಕ್, ದೀಪಾ ದಳವಾಯಿ, ಐಶ್ವರ್ಯ ಮಡಿವಾಳ, ಸಿದ್ದಪ್ಪ ಗುಡಿಮುಂದ್ಲರ, ಗಂಗಮ್ಮ ಇಚ್ಚಂಗಿ, ಮಾರುತಿ ಮುಂಡರಗಿ ಮುಂತಾದವರಿದ್ದರು

# ಆರ್‌ಜಿವಿವಿ ಹೆಚ್ಚುವರಿ ಹಣವನ್ನು ಸರ್ಕಾರಿ ಕಾಲೇಜುಗಳ ಸೌಲಭ್ಯಗಳಿಗೆ ಬಳಸಲು ಸಿಎಂ ಸೂಚನೆ

ಬೆಂಗಳೂರು,ಜ.9- ರಾಜೀವ್ ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಸಂಗ್ರಹವಾಗಿರುವ ಹೆಚ್ಚುವರಿ ಮೊತ್ತವನ್ನು ಸರ್ಕಾರಿ ವೈದ್ಯಕೀಯ ಕಾಲೇಜುಗಳ ಮೂಲ ಸೌಲಭ್ಯಗಳಿಗೆ ಒದಗಿಸಬೇಕು ಮತ್ತು ನಿಮ್ಹಾನ್ಸ್‌ಗೆ ಕರ್ನಾಟಕ ಆಡಳಿತ ಸೇವಾ ಅಧಿಕಾರಿ ನೇಮಕಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ್ ಅವರಿಗೆ ಸೂಚಿಸಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಗತಿ ಪರಿಶೀಲನಾ ಸಭೆ ಯಲ್ಲಿ ಮಾತನಾಡಿದ ಅವರು, ಪ್ರಸಕ್ತ ಸಾಲಿ ನಲ್ಲಿ ವೈದ್ಯಕೀಯ ಕಾಲೇಜುಗಳ ನಿರ್ಮಾಣ ಮತ್ತು ಉಪಕರಣಗಳ ಖರೀದಿಗೆ 400 ಕೋಟಿ ರೂ., ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಗಳ ನಿರ್ಮಾಣಕ್ಕೆ 130 ಕೋಟಿ ರೂ. ಅನು ದಾನ ಒದಗಿಸಲಾಗಿದ್ದು, ಆದಷ್ಟು ಶೀಘ್ರ ಕಾಮಗಾರಿ ಪೂರ್ಣಗೊಳಿಸಬೇಕು ಎಂದರು.

ಕ್ಯಾನ್ಸರ್ ಪ್ರಮಾಣ ಹೆಚ್ಚಳಕ್ಕೆ ಕಾರಣಗಳ ಅಧ್ಯಯನ ನಡೆಸಿ ವರದಿ ಸಲ್ಲಿಸಬೇಕು, ಕ್ಯಾನ್ಸರ್‌ಗೆ ಅಂತರ ರಾಷ್ಟ್ರೀಯ ಗುಣಮಟ್ಟದ ಚಿಕಿತ್ಸೆ ರಾಜ್ಯದಲ್ಲಿಯೇ ಲಭ್ಯವಾಗುವಂತೆ ಕ್ರಮ ಕೈಗೊಳ್ಳಬೇಕು. 2023-24ನೇ ಸಾಲಿನ ಅನುಮೋದಿತ ಎಲ್ಲಾ ಕಾಮಗಾರಿಗಳನ್ನು ನಿಗದಿತ ಸಮಯದೊಳಗೆ ಪೂರ್ಣ ಗೊಳಿಸಬೇಕು.

ಕೊಡಗು, ಗದಗ, ಕೊಪ್ಪಳ, ಕಾರವಾರ ಜಿಲ್ಲೆಗಳಲ್ಲಿ ನಿರ್ಮಾಣ ಹಂತದಲ್ಲಿರುವ 450 ಹಾಸಿಗೆ ಆಸ್ಪತ್ರೆಗಳ ಕಾಮಗಾರಿ ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಿದರು.

ಸಚಿವ ಶರಣ ಪ್ರಕಾಶ್ ಪಾಟೀಲ್ ಮಾತನಾಡಿ, ವೈದ್ಯಕೀಯ ಶಿಕ್ಷಣ ಇಲಾಖೆಗೆ 2024-25ನೇ ಸಾಲಿಗೆ 4,331 ಕೋಟಿ ರೂ. ಅನುದಾನ ಹಂಚಿಕೆಯಾಗಿದ್ದು, ಇದುವರೆಗೆ 3,099 ಕೋಟಿ ರೂ. ಬಿಡುಗಡೆಯಾಗಿದೆ, ಇದರಲ್ಲಿ 3,005 ಕೋಟಿ ರೂ. ವೆಚ್ಚ ಮಾಡಲಾಗಿದೆ. ಶೇ.96.97 ಪ್ರಗತಿ ಸಾಧಿಸಲಾಗಿದೆ ಎಂದು ಸಭೆಗೆ ವಿವರಿಸಿದರು.

# ಶರಣಾದ ನಕ್ಸಲರಿಗೆ ಜ.30ರವರೆಗೆ ಬಂಧನ

**(1ನೇ ಪುಟದಿಂದ)** ನಾಯಕರಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಿ ನಂತರ ಎನ್‌ಐಎ ವಿಶೇಷ ಕೋರ್ಟ್‌ನ ನ್ಯಾಯಾಧೀಶರಾದ ಗಂಗಾಧರ್ ಅವರ ಮುಂದೆ ಹಾಜರುಪಡಿಸಿದ್ದರು. ನ್ಯಾಯಾಧೀಶರು ಆರು ನಕ್ಸಲರಿಗೆ ನ್ಯಾಯಾಂಗ ಬಂಧನಕ್ಕೆ ಆದೇಶಿಸಿದ್ದಾರೆ. ಹೀಗಾಗಿ ನಕ್ಸಲರನ್ನು ಪರಪ್ಪನ ಅಗ್ರಹಾರ ಜೈಲಿಗೆ ಶಿಫ್ಟ್ ಮಾಡಲಾಗುವುದು.

ನಿನ್ನೆ ಆರು ಮಂದಿ ನಕ್ಸಲೀಯರು ಶಸ್ತ್ರಾಸ್ತ್ರ ತ್ಯಜಿಸಿ ಸಿಎಂ ಸಿದ್ದರಾಮಯ್ಯ ಅವರ ಮುಂದೆ ಶರಣಾದರು. ಇದರ ಸಂಕೇತವಾಗಿ ಮುಂಡಗಾರು ಲತಾ ನಕ್ಸಲ್ ಸಮವಸ್ತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಒಪ್ಪಿಸಿದರು. ಬಳಿಕ ಸಿದ್ದರಾಮಯ್ಯ ಸಂವಿಧಾನದ ಪ್ರತಿ ಹಾಗೂ ಹೂಗಳನ್ನು ಅವರಿಗೆ ನೀಡುವ ಮೂಲಕ ಸಮಾಜದ ಮುಖ್ಯವಾಹಿನಿಗೆ ಬರಮಾಡಿಕೊಂಡಿದ್ದರು. ನಂತರ ನಕ್ಸಲ್ ನಾಯಕರನ್ನು ಪೊಲೀಸರು ತಮ್ಮ ವಶಕ್ಕೆ ಪಡೆದಿದ್ದರು.

## ಅತ್ತಿಗೆರೆ ಕೆ.ಎಂ. ನಂದಿಬಸಪ್ಪ ನಿಧನ



ದಾವಣಗೆರೆ ತಾಲ್ಲೂಕು ಅತ್ತಿಗೆರೆ ಗ್ರಾಮದ **ಕುರುವತ್ತೆಪ್ಪರ ಶ್ರೀ ಕೆ.ಎಂ. ನಂದಿಬಸಪ್ಪ** ಅವರು ದಿನಾಂಕ 9-1-2025ರ ಗುರುವಾರ ಬೆಳಗ್ಗೆ ಬೆಂಗಳೂರಿನ ನಿವಾಸದಲ್ಲಿ ಹೃದಯಾಘಾತದಿಂದ ನಿಧನರಾದರು. ಮೃತರಿಗೆ 61 ವರ್ಷ ವಯಸ್ಸಾಗಿತ್ತು. ಬೆಂಗಳೂರು ನಗರದಲ್ಲಿ ಕನ್ಸಲ್ಟೆಂಟ್ ಇಂಜಿನಿಯರ್ ಹಾಗೂ ಬಿಲ್ಡರ್ ಆಗಿದ್ದ ಅವರು ತಾಯಿ, ಪತ್ನಿ, ಇಬ್ಬರು ಪುತ್ರಿಯರು ಹಾಗೂ ನಾಲ್ವರು ಸಹೋದರರು, ಮೂವರು ಸಹೋದರಿಯರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.01.2025ರ ಶುಕ್ರವಾರ ಮಧ್ಯಾಹ್ನ 1ಕ್ಕೆ ದಾವಣಗೆರೆ ತಾಲ್ಲೂಕು ಅತ್ತಿಗೆರೆ ಗ್ರಾಮದ ಮೃತರ ಜಮೀನಿನಲ್ಲಿ ನಡೆಯಲಿದೆ.

- ದುಃಖತಪ್ತ ಕುಟುಂಬ ವರ್ಗ

## ಚಿರಸ್ಮರಣೆ



**ಬಿ.ಎನ್. ಅಡಿವಪ್ಪ**
ತೆಂಗಿನಕಾಯಿ ವರ್ತಕರು ಹಾಗೂ
ಮಾಜಿ ತಾಲ್ಲೂಕು ಬೋರ್ಡ್ ಸದಸ್ಯರು (ಕಾಂಗ್ರೆಸ್)
ಹೊಸದುರ್ಗ ತಾಲ್ಲೂಕು
ಹೊಸದುರ್ಗ ರೋಡ್
ಜನನ : 06.01.1929
ಮರಣ : 10.01.1988



**ಶಿವಮ್ಮ ಬಿ.ಎನ್. ಅಡಿವಪ್ಪ**
ಜನನ : 18.02.1936
ಮರಣ : 29.05.2008

ನೀವು ನಮ್ಮನ್ನಗಲಿ ಇಂದಿಗೆ ವರ್ಷಗಳೇ ಕಳೆದವು,
ಸದಾ ನಿಮ್ಮ ಸ್ಮರಣೆಯಲ್ಲಿರುವ,

ಮಕ್ಕಳಾದ : A. ಚಂದ್ರಶೇಖರ್ KAS *(Rtd.)*
A. ಗಂಗಾಧರ್

ಸೊಸೆಯಂದಿರಾದ : ಸುಜಾತ, ಶಾಂತಲಾ ಕೋಂ. ದಿ|| B.A. ಜಗದೀಶ್,

ಮೊಮ್ಮಕ್ಕಳಾದ : ಅಪೂರ್ವ, ಅನನ್ಯ, ಅಭಿಚಂದ್ರ, ಬಿನಯ್ ಗಾಂಧಿ

ಮರಿಮೊಮ್ಮಕ್ಕಳಾದ : ಯಶಸ್, ಸೂರ್ಯ. ಆರ್ಯ

ಹಿತೈಷಿಗಳಾದ : ರಾಮುಲು ಯಶವಂತಪುರ, ರಮೇಶ್ ಜೋಸೆಫ್ ಹುಬ್ಬಳ್ಳಿ ಹಾಗೂ ಬುರುಡೇಕಟ್ಟೆ, ಮಲ್ಲಾಡಿಹಳ್ಳಿ, ಗುಂಡಿನಮಡು, ತಣಿಗೇಕಲ್ಲು ವಂಶಸ್ಥರು, ಅಪಾರ ಬಂಧು-ಮಿತ್ರರು.

## ಮುದಹದಡಿ ಗುಡ್ಡಪ್ಪರ ರಾಮಪ್ಪ ನಿಧನ



ದಾವಣಗೆರೆ ತಾಲ್ಲೂಕು ಮುದಹದಡಿ ಗ್ರಾಮದ ವಾಸಿ ಗುಡ್ಡಪ್ಪರ ರಾಮಪ್ಪ (53) ಅವರು ದಿನಾಂಕ 9.01.2025ರ ಗುರುವಾರ ಸಂಜೆ 4 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.01.2025ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಮುದಹದಡಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

## ನಾಗರಕಟ್ಟೆ ಮಂಜುನಾಥ ಆಚಾರ್ ನಿಧನ



ದಾವಣಗೆರೆ ತಾಲ್ಲೂಕು ನಾಗರಕಟ್ಟೆ ಗ್ರಾಮದ ವಾಸಿ ದಿ|| ವೀರಾಚಾರಿಯವರ ಪುತ್ರ ಮಂಜುನಾಥ ಆಚಾರ್ (44) ಅವರು ದಿನಾಂಕ 9-1-2025ರ ಗುರುವಾರ ಮಧ್ಯಾಹ್ನ 4 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10-1-2025ರ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ನಾಗರಕಟ್ಟೆಯ ಮೃತರ ಜಮೀನಿನಲ್ಲಿ ನೆರವೇರಲಿದೆ.

## ಆತ್ಮೀಯ ಗೆಳೆಯನಿಗೆ ಅಂತಿಮ ವಿದಾಯ...



**ನಂದಿ ಬಸಪ್ಪ ಕೆ.ಎಂ. ಅತ್ತಿಗೆರೆ**

*ಅಗಲಿದ ಆತ್ಮೀಯ ಗೆಳೆಯನಿಗೆ ಅಂತಿಮ ವಿದಾಯ...*
*ಗೆಳಯನ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಕುಟುಂಬದವರಿಗೆ ದುಃಖ ಭರಿಸುವ ಶಕ್ತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುವ ...*

**ವಿಶ್ವನಾಥ್ ಬಿ.ಜೆ.**
**ಎಸ್. ವಿ. ಆಟೋ ಟೆಕ್**
ರಿಂಗ್ ರೋಡ್, ವಿನೋಬ ನಗರ, ದಾವಣಗೆರೆ. ಮೊ. : 99451 25525

# 12.35 ಲಕ್ಷ ನಿರ್ಗತಿಕ ಹಸುಗಳಿಗೆ ಆಶ್ರಯ

ಲಖನೌ, ಜ.9- ಉತ್ತರ ಪ್ರದೇಶ ಸರ್ಕಾರವು ಗೋವುಗಳ ರಕ್ಷಣಾ ಕಾರ್ಯವನ್ನು ಚುರುಕುಗೊಳಿಸಿರುವುದಾಗಿ ಘೋಷಿಸಿದ್ದು, ಶೀತಗಾಳಿಯ ಸಂದರ್ಭದಲ್ಲಿ ಅಂದಾಜು 12.35 ಲಕ್ಷ ನಿರ್ಗತಿಕ ಹಸುಗಳು 7,696 ಶಿಬಿರಗಳ ಆಶ್ರಯ ಪಡೆದಿವೆ ಎಂದು ತಿಳಿಸಿದೆ.

ಒಂದೇ ಒಂದು ಹಸುವೂ ಚಳಿಯಿಂದ ಸಾಯಬಾರದು ಎಂಬುದನ್ನು ಖಾತ್ರಿಪಡಿಸಿಕೊಳ್ಳುವಂತೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಸೂಚನೆ ನೀಡಿದ ಬೆನ್ನಲ್ಲೇ, ರಾಜ್ಯದಾದ್ಯಂತ ಇರುವ ಆಶ್ರಯ ತಾಣಗಳಲ್ಲಿ ಟಾರ್ಪಾಲಿನ್, ವಾತಾವರಣವನ್ನು ಬೆಚ್ಚಗಿಡುವ ಸಾಧನಗಳು, ನೀರು, ಆಹಾರ ಸೇರಿದಂತೆ, ಅಗತ್ಯ ಸೌಕರ್ಯಗಳನ್ನು ಅಳವಡಿಸಲಾಗುತ್ತಿದೆ ಎಂದು ಸರ್ಕಾರ ಹೇಳಿಕೆ ಬಿಡುಗಡೆ ಮಾಡಿದೆ.

ಸದ್ಯ, ರಾಜ್ಯದಾದ್ಯಂತ 12,35,700 ಹಸುಗಳು 7,696 ಆಶ್ರಯ ತಾಣಗಳಲ್ಲಿವೆ. ಎಲ್ಲವುಗಳ ಗುಣಮಟ್ಟ ಹಾಗೂ ನಿರ್ವಹಣೆಯನ್ನು ಬಲಪಡಿಸಲು ಸರ್ಕಾರ ಉದ್ದೇಶಿಸಿದೆ ಎಂದು ಹೇಳಿಕೆಯಲ್ಲಿ ಉಲ್ಲೇಖಿಸಿದೆ.

ಮೂಲಸೌಕರ್ಯಕ್ಕೆ ಸಂಬಂಧಿಸಿದ ಎಲ್ಲ ಕೆಲಸಗಳೂ 2025ರ ಫೆಬ್ರವರಿ 25ರ ಒಳಗೆ ಪೂರ್ಣಗೊಳ್ಳಲಿವೆ. ಗುಣಮಟ್ಟ ಕಾಯ್ದುಕೊಳ್ಳುವಂತೆ ಸಂಬಂಧಿತ ಏಜೆನ್ಸಿಗಳಿಗೆ ನಿರ್ದೇಶನ ನೀಡಲಾಗಿದೆ. ಶೆಡ್‌ಗಳು, ಕುಡಿಯುವ ನೀರಿನ ಸೌಕರ್ಯಗಳನ್ನು ಗಟ್ಟಿಮುಟ್ಟಾಗಿ ನಿರ್ಮಿಸುವಂತೆ ಸೂಚಿಸಲಾಗಿದೆ ಎಂದು ಹೇಳಿದೆ.

ಯಾವುದೇ ಗೋ ಶಿಬಿರವನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸದಿದ್ದರೆ ಅಥವಾ ಆ ಸಂಬಂಧ ದೂರುಗಳು ಬಂದರೆ ಕೂಡಲೇ ಕ್ರಮ ಕೈಗೊಳ್ಳುವುದನ್ನು ಸರ್ಕಾರ ಕಡ್ಡಾಯಗೊಳಿಸಿದೆ.

## ನಗರದಲ್ಲಿ ಇಂದು ಎಸ್.ಆರ್.ಪಿ. ಸಂಭ್ರಮ

ಎಸ್.ಆರ್.ಪಿ. ಕಾನ್ವೆಂಟ್ ಮತ್ತು ಪ್ರೌಢಶಾಲೆಯಲ್ಲಿ 29ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ -ಎಸ್.ಆರ್.ಪಿ. ಸಂಭ್ರಮವು ಇಂದು ಬೆಳಿಗ್ಗೆ 10ಕ್ಕೆ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ.

ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯಲಿರುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್‌ಆರ್‌ಪಿ ಸಮೂಹ ಸಂಸ್ಥೆಗಳ ಸಂಸ್ಥಾಪಕ ತ್ಯಾವಣಿಗಿ ವೀರಭದ್ರಸ್ವಾಮಿ ವಹಿಸುವರು. ಮುಖ್ಯ ಅತಿಥಿಗಳಾಗಿ ಜ್ಞಾನಭಾರತಿ ವಿದ್ಯಾಲಯದ ಕಾರ್ಯದರ್ಶಿ ಎಂ.ಎನ್. ಮಲ್ಲೇಶ್ವರಪ್ಪ, ಶ್ರೀ ಮಂಜುನಾಥೇಶ್ವರ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ನಾಗರತ್ನ ಎಸ್.ಎಂ. ಆಗಮಿಸಲಿದ್ದಾರೆ.

# ಶಾಲಾ ಹಂತದಲ್ಲೇ ಮಕ್ಕಳಿಗೆ ಸಂಸ್ಕಾರದ ಬುನಾದಿ ನೀಡಬೇಕು

**ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹಾವೀರ ಎಂ. ಕರೆಣ್ಣನವರ್ ಕರೆ**



ದಾವಣಗೆರೆ, ಜ.9- ಉತ್ತಮ ಸಮಾಜ ನಿರ್ಮಾಣಕ್ಕಾಗಿ ಶಾಲಾ ಹಂತದಲ್ಲೇ ಮಕ್ಕಳಿಗೆ ಉತ್ತಮ ಸಂಸ್ಕಾರದ ಬುನಾದಿ ಹಾಕಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹಾವೀರ ಎಂ. ಕರೆಣ್ಣನವರ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ವತಿಯಿಂದ ನಗರದ ಗಾಂಧಿ ಭವನದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳನ್ನು ಸಮಾಜದಲ್ಲಿನ ಉನ್ನತ ಹುದ್ದೆಗಳಾದ ಜಿಲ್ಲಾಧಿಕಾರಿ, ನ್ಯಾಯಾಧೀಶ, ವೈದ್ಯ ಹಾಗೂ ವಿಜ್ಞಾನಿ ಸೇರಿದಂತೆ ಇನ್ನಿತರ ಅಧಿಕಾರಿಗಳನ್ನಾಗಿ ಮಾಡುವ ಶಕ್ತಿ, ಪ್ರತಿಯೊಬ್ಬ ಶಿಕ್ಷಕರಲ್ಲಿ ಇದೆ ಎಂದು ಶಿಕ್ಷಕರನ್ನು ಶ್ಲಾಘಿಸಿದರು.

ಶಾಲಾ ಹಂತದಲ್ಲಿ ತಂಬಾಕು ನಿಯಂತ್ರಣ ಸಮಿತಿಯನ್ನು ರಚಿಸಿ ಶಾಲಾ ವ್ಯಾಪ್ತಿಯಲ್ಲಿ ತಂಬಾಕು ಬಳಕೆಯಾಗದಂತೆ ಕ್ರಮ ವಹಿಸಬೇಕು ಮತ್ತು ಮಕ್ಕಳು ಪ್ರೌಢಾವಸ್ಥೆಯಲ್ಲಿ ದಾರಿ ತಪ್ಪದಂತೆ ಶಿಕ್ಷಕರು ರಕ್ಷಿಸಬೇಕು. ಈ ನಿಟ್ಟಿನಲ್ಲಿ ತಂಬಾಕು ಮುಕ್ತ ಯುವ ಪೀಳಿಗೆಯನ್ನಾಗಿಸಬೇಕೆಂದು ತಿಳಿಸಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಜಿ.ಡಿ ರಾಘವನ್ ಮಾತನಾಡಿ, 13 ರಿಂದ 15ರ ವಯೋಮಾನದ 293 ಮಕ್ಕಳು ಪ್ರತಿನಿತ್ಯ ತಂಬಾಕು ಸೇವನೆಗೆ ಬಲಿಯಾಗುತ್ತಿದ್ದಾರೆ. ತಂಬಾಕು ಬಳಕೆಗೆ ಬಲಿಯಾಗುವುದನ್ನು ತಪ್ಪಿಸುವುದು ನಮ್ಮೆಲ್ಲರ ಜವಾಬ್ದಾರಿ ಆಗಿದ್ದು, ಜಿಲ್ಲೆಯ ಎಲ್ಲಾ ಶಾಲೆಗಳನ್ನು ತಂಬಾಕು ಮುಕ್ತ ಶೈಕ್ಷಣಿಕ ಸಂಸ್ಥೆಗಳೆಂದು ಘೋಷಿಸುವುದು ತರಬೇತಿಯ ಪ್ರಮುಖ ಉದ್ದೇಶವಾಗಿದೆ ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಎ.ಎಲ್. ಕೃಷ್ಣನಾಯ್ಕ ಮಾತನಾಡಿ, ಸರ್ಕಾರ ನೀಡಿರುವ ಜವಾಬ್ದಾರಿಯನ್ನು ಕಟ್ಟುನಿಟ್ಟಾಗಿ ನಿರ್ವಹಿಸಬೇಕು. ಕಣ್ಣಿಗೆ ಕಾಣಿಸಿದ ತಪ್ಪನ್ನು ಕಡೆಗಣಿಸದೇ ಸರಿಪಡಿಸುವುದು ಎಲ್ಲರ ಜವಾಬ್ದಾರಿಯಾಗಿದೆ. ಹಾಗಾಗಿ ಎಲ್ಲಾ ಸಿ.ಆರ್.ಪಿ ಗಳು ತಮ್ಮ ಹಂತದಲ್ಲಿರುವ ಎಲ್ಲಾ ಶಾಲೆಗಳನ್ನು ಪರಿಶೀಲಿಸಿ, ತಂಬಾಕು ನಿಯಂತ್ರಣ ಕೋಶಕ್ಕೆ ವರದಿ ಸಲ್ಲಿಸಬೇಕೆಂದು ಸೂಚಿಸಿದರು.

ಶಾಲಾ ಶಿಕ್ಷಣ ಇಲಾಖೆಯ ಉಪಯೋಜನಾ ಸಮನ್ವಯಾಧಿಕಾರಿ ರವಿ, ದಂತ ವಿಭಾಗದ ಮುಖ್ಯಸ್ಥ ಡಾ.ಪಿ.ಎಂ. ತಿಪ್ಪೇಸ್ವಾಮಿ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಎನ್.ಪಿ. ಮಂಜುಳ, ಸತೀಶ್ ಕಲಹಾಳ್, ಶೈಲಾ ಶಾಮನೂರು ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ, ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ವತಿಯಿಂದ ದಾವಣಗೆರೆ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ, ಉತ್ತರ-ದಕ್ಷಿಣ ಹಾಗೂ ಚನ್ನಗಿರಿ ವಲಯದ ಸಿ.ಆರ್.ಪಿ ಗಳಿಗೆ ತಂಬಾಕು ಮುಕ್ತ ಶೈಕ್ಷಣಿಕ ಸಂಸ್ಥೆ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಿತು.

# ಮಹಿಳಾ ಸಬಲೀಕರಣಕ್ಕೆ ಸ್ವ-ಉದ್ಯೋಗ ತರಬೇತಿ ಅವಶ್ಯ




**ಮಹಿಳಾ ಸ್ವ-ಉದ್ಯೋಗ ತರಬೇತಿ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಜವಳಿ ಉದ್ಯಮಿ ಬಿ.ಸಿ.ಉಮಾಪತಿ**

ದಾವಣಗೆರೆ, ಜ.9- ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಲು ಮಹಿಳಾ ಸ್ವ ಉದ್ಯೋಗ ತರಬೇತಿ ಕೇಂದ್ರಗಳ ಅವಶ್ಯವಿದೆ ಎಂದು ಜವಳಿ ಉದ್ಯಮಿ ಬಿ.ಸಿ. ಉಮಾಪತಿ ಹೇಳಿದರು.

ಸ್ಥಳೀಯ ವಿದ್ಯಾನಗರ 2 ನೇ ಬಸ್ ನಿಲ್ದಾಣದ ಬಳಿ ಭಾರತ ವಿಕಾಸ ಪರಿಷದ್ ಗೌತಮ ಶಾಖೆ ದಾವಣಗೆರೆ ವತಿಯಿಂದ ಇಂದು ಹಮ್ಮಿಕೊಂಡಿದ್ದ ಮಹಿಳಾ ಸ್ವ-ಉದ್ಯೋಗ ತರಬೇತಿ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಿಂದೆ ಮಹಿಳೆ ಕೇವಲ ನಾಲ್ಕು ಗೋಡೆಗಳ ಮಧ್ಯೆ ಜೀವನ ಸಾಗಿಸುತ್ತಿದ್ದಳು. ದುಡಿಯುವ ಸಮಾನತೆ ಇರಲಿಲ್ಲ. ಅಡುಗೆ ಮನೆಗೆ ಸೀಮಿತಳಾಗಿದ್ದಳು. ಆದರೆ ಕಾಲ ಬದಲಾದಂತೆ ಮಹಿಳೆ ಪುರುಷನಷ್ಟೇ ಸರಿ ಸಮನಾಗಿ ದುಡಿಯುವ ಮೂಲಕ ಸ್ವಾವಲಂಬಿ ಬದುಕಿನತ್ತ ಮುಖ ಮಾಡಿರುವುದು ಸಂತಸದ ವಿಚಾರ. ಸರ್ಕಾರಗಳು ಮತ್ತು ಖಾಸಗಿ ಸಂಘ-ಸಂಸ್ಥೆಗಳು ಮಹಿಳಾ ಸಬಲೀಕರಣಕ್ಕಾಗಿ ಅನೇಕ ಯೋಜನೆಗಳನ್ನು ರೂಪಿಸಿದ್ದು, ಮಹಿಳೆಯರಿಗೆ ಸ್ವಯಂ ಉದ್ಯೋಗ ತರಬೇತಿ ನೀಡುತ್ತಿರುವುದು ಶ್ಲಾಘನೀಯ ಎಂದರು.

ಶ್ರದ್ಧೆ, ಸತತ ಪರಿಶ್ರಮದ ಮೂಲಕ ಕೌಶಲ್ಯ ಹೊಂದಿದ ಮಹಿಳೆ ಆರ್ಥಿಕ ಸ್ವಾವಲಂಬನೆ ಪಡೆಯುವ ಮೂಲಕ ಸಾಮಾಜಿಕ, ಆರ್ಥಿಕ ಸುಧಾರಣೆಗೆ ಕೈ ಜೋಡಿಸಬಹುದು ಎಂದು ಹೇಳಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ, ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದ ರಾಮಕೃಷ್ಣ ಆಶ್ರಮದ ಶ್ರೀ ತ್ಯಾಗೀಶ್ವರಾನಂದ ಮಹಾರಾಜ್ ಮಾತನಾಡಿ, ಮನೆ ಕೆಲಸದ ಒತ್ತಡದ ನಡುವೆಯು ಹೊಲಿಗೆ, ಕೈ ಕಸೂತಿಯಂತಹ ಸ್ವ-ಉದ್ಯೋಗ ತರಬೇತಿ ಸದುಪಯೋಗ ಪಡೆದು ಆರ್ಥಿಕವಾಗಿ ಸಬಲರಾಗಿ ಕುಟುಂಬಕ್ಕೆ ಆಧಾರಾಗಬೇಕೆಂದರು.

ರಾಮಕೃಷ್ಣ ಆಶ್ರಮದ ಮಹಿಳಾ ಸಬಲೀಕರಣ ಯೋಜನೆಗಳ ಬಗ್ಗೆ ಮಾಹಿತಿ ನೀಡಿದ ಸ್ವಾಮೀಜಿಯವರು, ಯಾವುದೇ ಕೆಲಸ ಕೊಟ್ಟರೂ ಸಮರ್ಥವಾಗಿ ನಿಭಾಯಿಸುವ ಶಕ್ತಿ ಇದೆ ಎಂದರು.

ಬಿಜೆಪಿ ಯುವ ಮುಖಂಡ ಕೊಂಡಜ್ಜಿ ಜಯಪ್ರಕಾಶ್ ಮಾತನಾಡಿ, ಮಹಿಳಾ ಸ್ವ-ಉದ್ಯೋಗ ತರಬೇತಿಯ ಸದುಪಯೋಗ ಪಡೆದುಕೊಂಡು ಆರ್ಥಿಕ ಸ್ವಾವಲಂಬಿಗಳಾಗುವಂತೆ ಸಲಹೆ ನೀಡಿದರು.

ಭಾರತ ವಿಕಾಸ ಪರಿಷದ್ ಗೌತಮ ಶಾಖೆ ದಾವಣಗೆರೆ ಘಟಕದ ಅಧ್ಯಕ್ಷ ಎ.ಎಸ್. ವಿಜಯಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಭಾವಿಪ ದಕ್ಷಿಣ ಪ್ರಾಂತದ ಉಪಾಧ್ಯಕ್ಷ ಟಿ.ಎಸ್. ಜಯರುದ್ರೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಜ್ಯೋತಿ ಧನಂಜಯ ಮುಂದಿನ ತರಗತಿಗಳಲ್ಲಿ ನೀಡಲಾಗುವ ಕೌಶಲ್ಯಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು.

ಬಾಲ ವಿಕಾಸ ಸಂಚಾಲಕರಾದ ಸಂಗೀತ ಮನೋಲಿ, ದಕ್ಷಿಣ ಪ್ರಾಂತೀಯ ಖಜಾಂಚಿ ಪುಟ್ಟಪ್ಪ ಕಾಶೀಪುರ, ತರಬೇತಿ ಸಂಚಾಲಕಿ ನೇತ್ರ ಮಧುಕರ, ಅಕ್ಷಯ್ ಸುರ್ವೆ, ಸದಸ್ಯ ಜಯಣ್ಣ, ಶೋಭಾ ಕೊಟ್ರೇಶ್, ಶಂಭುಲಿಂಗಪ್ಪ, ಪಾಲಿಕೆ ಸದಸ್ಯ ಗೀತಾ ದಿಳ್ಳೆಪ್ಪ ಮತ್ತಿತರರು ಉಪಸ್ಥಿತರಿದ್ದರು.

ಭಾವಾನಿ ಶಂಭುಲಿಂಗಪ್ಪ, ಶೀಲಾ ನಾಯಕ ವಂದೇ ಮಾತರಂ ಗೀತೆ ಹಾಡಿದರು. ಶಾಖೆಯ ಕಾರ್ಯದರ್ಶಿ ಮಧುಕರ ಸ್ವಾಗತಿಸಿದರು. ಡಾ. ಆರತಿ ಸುಂದರೇಶ್ ನಿರೂಪಿಸಿದರು. ಶಾಂತ ತಿಪ್ಪಣ್ಣ ವಂದಿಸಿದರು.

# ಸಂಜೀವಿನಿ ಸ್ವ ಸಹಾಯ ಗುಂಪುಗಳಿಗೆ ಸ್ಥಳದಲ್ಲೇ ಸಾಲ-ಮೇಳ

**7 ಸಂಘಗಳಿಗೆ 27 ರೂ. ಲಕ್ಷ ಸಾಲ ಮಂಜೂರಾತಿ**

ದಾವಣಗೆರೆ, ಜ. 9 - ಸಂಜೀವಿನಿ ಸ್ವ-ಸಹಾಯ ಸಂಘದ ಸದಸ್ಯರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸಬಲರಾಗಲು ಸುತ್ತು ನಿಧಿ, ಸಮುದಾಯ ಬಂಡವಾಳ ನಿಧಿ ಹಾಗೂ ಸರ್ಕಾರದ ಆರ್ಥಿಕ ನೆರವು ಒದಗಿಸುವ ಸಂಜೀವಿನಿ ಕಾರ್ಯಕ್ರಮಗಳು ಅತ್ಯಂತ ಪ್ರಮುಖ ಪಾತ್ರವಹಿಸಿವೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್ ತಿಳಿಸಿದರು.

ಜಿಲ್ಲಾ ಪಂಚಾಯತ್ ಆವರಣದಲ್ಲಿನ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಯೋಜನೆಯ ಸಂಜೀವಿನಿ ಸ್ವ ಸಹಾಯ ಸಂಘಗಳಿಗೆ ವಿವಿಧ ಬ್ಯಾಂಕ್‌ಗಳ ಮೂಲಕ ಏರ್ಪಡಿಸಲಾದ ಸಾಲ ಮೇಳವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಎನ್‌ಆರ್‌ಎಲ್‌ಎಂ ರಡಿ 9700 ಸ್ವಹಾಯ ಸಂಘಗಳು ಇವೆ, ಇದರಲ್ಲಿ ದಾವಣಗೆರೆ ತಾಲ್ಲೂಕಿನಲ್ಲಿ 1861 ಸ್ವಹಾಯ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ. ಇವುಗಳಿಗೆ ಒಟ್ಟು ರೂ. 11 ಕೋಟಿ 80 ಲಕ್ಷ ಸಮುದಾಯ ಬಂಡವಾಳ ನಿಧಿ ಸರ್ಕಾರದಿಂದ ಬಿಡುಗಡೆಯಾಗಿದೆ. ಇದರ ಉಪಯೋಗವನ್ನು ಪಡೆದುಕೊಳ್ಳಬೇಕು ಎಂದರು.

ಸಂಜೀವಿನಿ ಸ್ವ ಸಹಾಯ ಸಂಘಗಳಿಗೆ ಬ್ಯಾಂಕ್‌ಗಳಿಂದ ಸಾಲವನ್ನು ಕೊಡಲಾಗುತ್ತವೆ, ಸಾಲ ಪಡೆದು ಉತ್ಪಾದಕಾ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಕುಟುಂಬವನ್ನು ಆರ್ಥಿಕವಾಗಿ, ಸಧೃಢವಾಗಿ ನೋಡಿಕೊಳ್ಳಲು ಸಂಜೀವಿನಿ ಸಂಘದಿಂದ ಮಾತ್ರ ಸಾಧ್ಯವಾಗಿದೆ ಎಂದು ಮಹಿಳೆಯರಿಗೆ ತಿಳಿಸಿದರು.

ಸಾಲ ಮೇಳದಲ್ಲಿ 170 ಸ್ವ ಸಹಾಯ ಸಂಘಗಳಿಂದ ಸಾಲ ಮಂಜೂರಾತಿಗಾಗಿ ಅರ್ಜಿ ಸ್ವೀಕರಿಸಲಾಗಿದ್ದು, ಬ್ಯಾಂಕ್‌ಗಳು ಪರಿಶೀಲನೆ ನಡೆಸಿ ಚಟುವಟಿಕೆಯನ್ನಾಧರಿಸಿ ಮಂಜೂರಾತಿ ನೀಡಲಿವೆ ಎಂದರು.

ಸಾಲ ಮೇಳದಲ್ಲಿ ಕೆನರಾ ಬ್ಯಾಂಕ್, ಗ್ರಾಮೀಣ ಬ್ಯಾಂಕ್, ಯೂನಿಯನ್ ಬ್ಯಾಂಕ್, ಡಿಸಿಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್ ಸೇರಿದಂತೆ, ಇನ್ನಿತರೆ ಬ್ಯಾಂಕ್‌ಗಳು ಮೇಳದಲ್ಲಿ ಭಾಗವಹಿಸಿದ್ದವು. ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕಿ ರೇಷ್ಮ ಕೌಸರ್, ಅಭಿಯಾನ ಮ್ಯಾನೇಜರ್ ಭೋಜರಾಜ್ ಮತ್ತು ಇತರರು ಭಾಗವಹಿಸಿದ್ದರು.

## ಹರಿಹರ ಸಾಯಿಬಾಬಾ ಮಂದಿರದಲ್ಲಿ ಧನುರ್ಮಾಸದ ಪೂಜೆ



ಹರಿಹರ,ಜ.9- ಇಲ್ಲಿನ ಕೇಶವ ನಗರದ ಪಾಟೀಲ್ ಬಡಾವಣೆಯ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಧನುರ್ಮಾಸದ ಅಂಗವಾಗಿ ಬೆಳಗ್ಗೆ ಶ್ರೀ ಶಿರಡಿ ಸಾಯಿಬಾಬಾ, ಕಾಶಿ ವಿಶ್ವನಾಥ ಸ್ವಾಮಿ, ವಿಘ್ನೇಶ್ವರ ಸ್ವಾಮಿ, ನವಗ್ರಹ ದೇವರಿಗೆ ರುದ್ರಾಭಿಷೇಕ, ಅಲಂಕಾರ ಮಹಾಮಂಗಳಾರತಿ ನಂತರ ಅಷ್ಟ ಲಕ್ಷ್ಮಿ ಪೂಜೆ, ನಾಗದೋಷ ನಿವಾರಣೆ ಪೂಜೆ, ಹೋಮ ಹವನ ಮುಂತಾದ ಪೂಜಾ ಕಾರ್ಯಕ್ರಮಗಳು ಪ್ರಧಾನ ಅರ್ಚಕ ಕುಮಾರಸ್ವಾಮಿ ಹಿರೇಮಠ ಅವರ ನೇತೃತ್ವದಲ್ಲಿ ನಡೆದವು.

ಈ ಸಂದರ್ಭದಲ್ಲಿ ಸಾಯಿಬಾಬಾ ಮಂದಿರ ಸಮಿತಿಯ ಗೌರವಾಧ್ಯಕ್ಷ ಶಂಕರ್ ಖಟಾವ್ಕರ್, ಅಧ್ಯಕ್ಷ ಬಸವರಾಜ್ ಪಾಟೀಲ್, ಉಪಾಧ್ಯಕ್ಷರಾದ ಗುರುಪ್ರಸಾದ್, ಹನುಮಂತಪ್ಪ ಸುರ್ವೆ, ಕಾರ್ಯದರ್ಶಿ ವಾಗೀಶ್ ಪಾಟೀಲ್, ಖಜಾಂಚಿ ಜೆ.ಎಂ. ಲಿಂಗರಾಜ್, ಸಹ ಕಾರ್ಯದರ್ಶಿ ಚಂದ್ರಶೇಖರ್ ಸರಪದ ಪಿ.ಕೆ. ಸತೀಶ್ ಪಾಟೀಲ್, ಎನ್. ಪ್ರಕಾಶ್, ಶಶಿಧರ್ ಆನ್ವೇರಿ, ಡಿ. ಗೋಪಾಲರಾವ್, ಮಹಾದೇವಪ್ಪ ಸರಪದ್, ಜಿ.ಎಸ್. ಪ್ರಕಾಶ್, ಎಸ್.ಎಸ್. ಸಂಗನಾಳಮಠ್, ದೊರೆಸ್ವಾಮಿ, ಮಂಜುನಾಥ್, ಭೀಮಣ್ಣ ಐರಣಿ, ವೀರಪ್ಪ, ನಿಂಗಪ್ಪ, ಅಂಜಿನಪ್ಪ ಇತರರು ಹಾಜರಿದ್ದರು.

# ಪುನಃ ಸ್ವಚ್ಛತೆಗೆ ಮುಂದಾದ 'ನಮ್ಮ ಊರು- ನಮ್ಮ ಹೊಣೆ' ತಂಡ




ಹರಿಹರ, ಜ.9- ಇಲ್ಲಿನ 'ನಮ್ಮ ಊರು-ನಮ್ಮ ಹೊಣೆ' ತಂಡದವರಿಂದ ತುಂಗಭದ್ರಾ ನದಿ ದಂಡೆಯ ಮೇಲಿದ್ದ ಕಸದ ರಾಶಿಯನ್ನು ಸ್ವಚ್ಛತೆ ಮಾಡುವ ಮೂಲಕ ನದಿಯ ಸ್ವಚ್ಚತೆಗೆ ಪುನಃ ಮುಂದಾಗಿದ್ದು, ಸಾರ್ವಜನಿಕರು ಇದರಲ್ಲಿ ಪಾಲ್ಗೊಂಡು ಸಹಕಾರ ನೀಡುವಂತೆ ತಂಡದ ಮುಖ್ಯಸ್ಥರಾದ ಅಂಜು ಸುರೇಶ್ ರಾಜೇನವರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ತುಂಗಭದ್ರಾ ನದಿಯು ಇಲ್ಲಿನ ಜನತೆಗೆ ಜೀವ ನದಿಯಾಗಿದ್ದು, ಕಳೆದ ಆರು ವರ್ಷಗಳಿಂದ ಪ್ರತಿ ಭಾನುವಾರ ನಮ್ಮ ನಮ್ಮ ತಂಡದ ವತಿಯಿಂದ ನದಿಯನ್ನು ಸ್ವಚ್ಚತೆ ಮಾಡಲಿಕ್ಕೆ ಮುಂದಾಗಿದ್ದ ಪರಿಣಾಮವಾಗಿ, ನಗರದ ಜನತೆ, ರಾಜಕೀಯ ಪಕ್ಷದವರು ಹಾಗೂ ಅಧಿಕಾರಿ ವರ್ಗದವರೂ ಸಹ ನಮಗೆ ಕೈ ಜೋಡಿಸಿ, ಉತ್ತಮ ರೀತಿಯಲ್ಲಿ ಸಹಕಾರ ನೀಡಿದ್ದರು. ಆದರೆ ನಮ್ಮ ಬಳಗದಲ್ಲಿ ಇದ್ದಂತಹ ರಾಘವೇಂದ್ರ ಎಂಬುವವರು ಅಕಾಲಿಕವಾಗಿ ಮರಣ ಹೊಂದಿದ ಪರಿಣಾಮ, ಕಳೆದ ಆರು ತಿಂಗಳಿಂದ ಸ್ವಚ್ಛತೆ ಮಾಡಲಿಕ್ಕೆ ಮುಂದಾಗಿರಲಿಲ್ಲ. ಆದರೆ ಈಗ ಮತ್ತೆ ಸಂಕ್ರಾಂತಿಗಾಗಿ ನದಿಯ ಎರಡು ಭಾಗದಲ್ಲಿ ಸ್ವಚ್ಚತೆಗೆ ಮುಂದಾಗಿರುವುದಾಗಿ ಹೇಳಿದರು.

ತಂಡದ ರವಿಕುಮಾರ್ ಮಾತನಾಡಿ, ನದಿಯ ದಂಡೆಯ ಮೇಲಿರುವ ಕಸವನ್ನು ಹಾಗೂ ತ್ಯಾಜ್ಯ ವಸ್ತುಗಳ ಸ್ವಚ್ಚತೆಗೆ ಪ್ರತಿ ಭಾನುವಾರ ಬೆಳಗ್ಗೆ 7 ಗಂಟೆಯಿಂದ 10 ಗಂಟೆಯವರೆಗೆ ಸ್ವಚ್ಛತೆ ಮಾಡಿ ತದನಂತರ ಅಲ್ಲಿರುವ ಕಸವನ್ನು ನಗರಸಭೆಯ ವಾಹನಗಳ ಮೂಲಕ ಬೇರೆ ಕಡೆಗೆ ಸಾಗಿಸಲಾಗುತ್ತದೆ. ನಮಗೆ ಹರಿಹರ ನಗರಸಭೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸಹಕಾರ ನೀಡಿದಂತೆ, ಕೋಡಿಯಾಲ ಹೊಸಪೇಟೆ ಗ್ರಾಮದ ಗ್ರಾಮ ಪಂಚಾಯತಿಯವರೂ ಸಹ ಸಹಕಾರ ನೀಡಿದರೆ ಅಯ್ಯಪ್ಪ ಸ್ವಾಮಿ ದೇವಸ್ಥಾನ ಭಾಗದ ಕಸವನ್ನು ಸಾಗಿಸಲು ಅನುಕೂಲವಾಗಲಿದೆ ಎಂದು ಹೇಳಿದರು.

ರಾಘವೇಂದ್ರ ಎ.ತೇಲ್ಕರ್ ಮಾತನಾಡಿ, ನದಿಗೆ ಬರುವಂತಹ ಸಾರ್ವಜನಿಕರಿಗೆ, ಜಳಕ ಮಾಡಿದ ನಂತರ ಬಟ್ಟೆಗಳನ್ನು ಬದಲಾಯಿಸಲು ತಾತ್ಕಾಲಿಕ ಶೆಡ್ ನಿರ್ಮಾಣ ಮಾಡಬೇಕು. ನದಿಯ ದಂಡೆಯ ಮೇಲೆ ಕಸದ ತೊಟ್ಟಿ ಇಡಬೇಕು. ಪ್ರತಿನಿತ್ಯ ನದಿಯ ಬಳಿ ಬಿದ್ದಿರುವ ಪ್ಲಾಸ್ಟಿಕ್, ಹಳೆಯ ಬಟ್ಟೆ ಮತ್ತು ಕಸವನ್ನು ತೆರವುಗೊಳಿಸುವಂತಹ ಕೆಲಸ ಆಗಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಸಾಕ್ಷಿ ಶಿಂಧೆ, ಗಂಗಾಧರ್ ದುರುಗೋಜಿ, ಟಿ.ಸಿ. ನಿರಂಜನ್ ಮತ್ತಿತರರು ಇದ್ದರು.

## ನಗರದಲ್ಲಿ ಇಂದು ಮೌಂಟ್ ಎವರೆಸ್ಟ್ ಉತ್ಸವ

ಮೌಂಟ್ ಎವರೆಸ್ಟ್ ವಿದ್ಯಾಲಯದಲ್ಲಿ 15ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ - ಮೌಂಟ್ ಎವರೆಸ್ಟ್ ಉತ್ಸವವು ಇಂದು ಸಂಜೆ 4 ಗಂಟೆಗೆ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ.

ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯಲಿರುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ತ್ಯಾವಣಿಗಿ ವೀರಭದ್ರಸ್ವಾಮಿ ವಹಿ ಸುವರು. ಮುಖ್ಯ ಅತಿಥಿಗಳಾಗಿ ಶೈಕ್ಷಣಿಕ ಮಾರ್ಗದರ್ಶ ಕರಾದ ಪತ್ರೇಶ್, ಎಸಿ.ಎಂ ಸ್ಕೂಲ್‌ನ ಸಂಸ್ಥಾಪಕ ಕಾರ್ಯದರ್ಶಿ ಎಸ್.ಎಂ. ಮಂಜುನಾಥ ಸ್ವಾಮಿ ಆಗಮಿಸಲಿದ್ದಾರೆ.

# 2025ರಲ್ಲಿ ಔದ್ಯಮಿಕ ಮೌಲ್ಯ ಪಡೆಯಲಿರುವ ಎ.ಐ.




ನವದೆಹಲಿ, ಜ. 9- 2024ರಲ್ಲಿ ಬಿಸಿ ಬಿಸಿ ಚರ್ಚೆಗೆ ಸೀಮಿತವಾಗಿದ್ದ ಕೃತಕ ಬುದ್ಧಿವಂತಿಕೆ (ಎ.ಐ.), 2025 ರಲ್ಲಿ ಹಲವು ಕೈಗಾರಿಕಾ ವಲಯಗಳಲ್ಲಿ ಪ್ರಾಮುಖ್ಯತೆ ಪಡೆದುಕೊಳ್ಳುವ ಜೊತೆಗೆ ಔದ್ಯಮಿಕ ಮೌಲ್ಯ ಪಡೆಯಲಿದೆ ಎಂದು ಪರಿಣಿತರು ತಿಳಿಸಿದ್ದಾರೆ.

ಕೃತಕ ಬುದ್ಧಿವಂತಿಕೆಯು ಮನುಷ್ಯರಂತೆಯೇ ಕಾರ್ಯ ನಿರ್ವಹಿಸುವ ಸಾಮರ್ಥ್ಯ ಹೆಚ್ಚಿಸಿಕೊಳ್ಳುತ್ತಿದೆ. ಹೀಗಾಗಿ ಎಐ, ಉದ್ಯಮಗಳ ಅನಿವಾರ್ಯ ಅಂಗವಾಗಲಿದೆ. ಹೊಸ ತಂತ್ರಜ್ಞಾನಕ್ಕಾಗಿ ಕಂಪನಿಗಳಿಂದ ಹಿಡಿದು ಗ್ರಾಹಕರವರೆಗೆ ಎಲ್ಲರೂ ಹೊಂದಿಕೊಳ್ಳುವ ಅನಿವಾರ್ಯತೆ ಎದುರಾಗಲಿದೆ.

ಕೃತಕ ಬುದ್ಧಿವಂತಿಕೆಯನ್ನು ದೈನಂದಿನ ಕಾರ್ಯದಲ್ಲಿ ಸೇರ್ಪಡೆ ಮಾಡುವ ಪ್ರಕ್ರಿಯೆಯಲ್ಲಿ ತೊಡಗಿದ್ದೇವೆ. ಎ.ಐ. ಈಗ ಆರಂಭಿಕ ದಿನಗಳನ್ನು ಮುಗಿಸಿದ್ದು ಪ್ರಬುದ್ಧವಾಗುವ ಹಂತಕ್ಕೆ ತಲುಪಿದೆ ಎಂದು ವಿಪ್ರೊದ ಸಿಐಒ ಅನುಪ್ ಪುರೋಹಿತ್ ಹೇಳಿದ್ದಾರೆ.

ಎ.ಐ. ಕೇವಲ ಟೆಕ್ ಉದ್ಯಮಗಳಿಗೆ ಸೀಮಿತವಾಗಿಲ್ಲ. ಬ್ಯಾಂಕಿಂಗ್, ಹಣಕಾಸು ಹಾಗೂ ಆರೋಗ್ಯ ಸೇವೆಯಂತಹ ಸಾಂಪ್ರದಾಯಿಕ ವಲಯಗಳಲ್ಲೂ ಬೆಸೆದುಕೊಳ್ಳುತ್ತಿದೆ. ಈ ವಲಯಗಳ ಕಾರ್ಯದಕ್ಷತೆ ಹೆಚ್ಚಿಸುತ್ತಿದೆ ಹಾಗೂ ಗ್ರಾಹಕರ ಜೊತೆಗಿನ ಸಂವಾದ ಉತ್ತಮ ಪಡಿಸುತ್ತಿದೆ ಎಂದವರು ಹೇಳಿದ್ದಾರೆ.

ಭಾರತೀಯ ಉದ್ಯಮಗಳೂ ಸಹ ಎ.ಐ. ಬಳಕೆಯನ್ನು ವಿಸ್ತರಿಸಿಕೊಳ್ಳಬೇಕಿದೆ. ಕೇವಲ ವಿಶ್ಲೇಷಣೆ ಹಾಗೂ ಮಾಹಿತಿ ಪ್ರದರ್ಶನಕ್ಕಷ್ಟೇ ಎ.ಐ. ಸೀಮಿತವಲ್ಲ. ಎ.ಐ.ನ ಹಲವು ಸಾಧ್ಯತೆಗಳನ್ನು ಬಳಸಿಕೊಳ್ಳಬೇಕಿದೆ ಎಂದು ಟೆಕ್ ಒಕ್ಕೂಟವಾದ ನ್ಯಾಸ್ಕಾಂ ಹೇಳಿದೆ.

ಜಾಗತಿಕವಾಗಿ ಎ.ಐ. ಮಾರುಕಟ್ಟೆಯ ಮೌಲ್ಯ ಈಗ 235 ಶತಕೋಟಿ ಡಾಲರ್ ಆಗಿದೆ. 2028ರ ವೇಳೆಗೆ ಇದು 631 ಶತಕೋಟಿ ಡಾಲರ್‌ಗಳಿಗೆ ತಲುಪಲಿದೆ. ಕೈಗಾರಿಕೆ ಹಾಗೂ ಆರ್ಥಿಕತೆಯಲ್ಲಿ ಎ.ಐ. ಮಹತ್ತರ ಬದಲಾವಣೆ ತರಲಿದೆ. ಕೃಷಿ ವಿಶ್ಲೇಷಣೆಯಿಂದ ಹಿಡಿದು ವೈಯಕ್ತಿಕ ಆರೋಗ್ಯ ಸೇವೆಗಳವರೆಗೆ ಎ.ಐ. ಬಳಕೆಯಾಗಲಿದೆ. ಕ್ವಾಂಟಮ್ ಕಂಪ್ಯೂಟಿಂಗ್ ರೀತಿಯ ಹೊಸ ತಂತ್ರಜ್ಞಾನಗಳ ಮೇಲೂ ಪರಿಣಾಮ ಬೀರಲಿದೆ ಎಂದು ಟೆಕ್ ಮಹೀಂದ್ರಾದ ಸಿಓಓ ಅತುಲ್ ಸೋನೇಜಾ ತಿಳಿಸಿದ್ದಾರೆ.

ಮನುಷ್ಯರು ಮಾಡುವಂತಹ ಕೆಲಸಗಳನ್ನು ತಂತ್ರಜ್ಞಾನ ಮಾಡುವ ದೃಶ್ಯಗಳು 2025ರಲ್ಲಿ ವಾಸ್ತವವಾಗಲಿವೆ. ಸಾಮಾನ್ಯ ಹಾಗೂ ಪುನರಾವರ್ತಿತ ಕೆಲಸಗಳನ್ನು ಕಂಪನಿಗಳು ಅಜೆಂಟಿಕ್ ಎ.ಐ. ತಂತ್ರಜ್ಞಾನಕ್ಕೆ ವಹಿಸಲಿವೆ.

2025ರಲ್ಲಿ ಅಜೆಂಟಿಕ್ ಎ.ಐ. ಉದಯವಾಗಲಿದೆ. ಇದರಿಂದ ಗ್ರಾಹಕರ ಜೊತೆಗಿನ ಸಂವಾದ, ಉದ್ಯಮ ದಕ್ಷತೆ ಹಾಗೂ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಗಳಲ್ಲಿ ಬದಲಾವಣೆ ಬರಲಿದೆ ಎಂದು ಸೇಲ್ಸ್ ಫೋರ್ಸ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಅರುಣ್ ಪರಮೇಶ್ವರನ್ ಹೇಳಿದ್ದಾರೆ.

ಎ.ಐ. ಜೊತೆಗೆ ಕ್ಲೌಡ್ ಕಂಪ್ಯೂಟಿಂಗ್ ವಲಯ ಸಹ ಗಣನೀಯ ಬೆಳವಣಿಗೆ ಕಾಣಲಿದೆ. ಅಮೆಜಾನ್ ವೆಬ್ ಸರ್ವೀಸಸ್ ಹಾಗೂ ಮೈಕ್ರೋಸಾಫ್ಟ್ ಅಜ್ಯರೆ ರೀತಿಯ ದೈತ್ಯ ಕಂಪನಿಗಳು ಭಾರತದಲ್ಲಿ ತಮ್ಮ ಕಾರ್ಯ ನಿರ್ವಹಣೆ ಹೆಚ್ಚಿಸಲಿವೆ. ಇದು ಐಟಿ ವಲಯದ ಕಾರ್ಯ ನಿರ್ವಹಣೆಗೆ ನೆರವಾಗಲಿದೆ. ಕ್ಲೌಡ್ ಸೇವೆಗಳ ವಿಸ್ತರಣೆಯಿಂದ ಆವಿಷ್ಕಾರಕ್ಕೆ ಹೆಚ್ಚು ನೆರವಾಗಲಿದೆ. ಹಾಗೂ ಮಾರುಕಟ್ಟೆ ಬದಲಾವಣೆಗೆ ಅಗತ್ಯವಾಗಿ ಹೊಂದಿಕೊಳ್ಳಲು ಸಾಧ್ಯವಾಗಲಿದೆ.

ದೇಶದಲ್ಲಿ ಕ್ಲೌಡ್ ಕಂಪ್ಯೂಟಿಂಗ್ ವಲಯ ಈಗ ಶೇ. 23.8ರಷ್ಟು ವೇಗವಾಗಿ ಬೆಳೆಯುತ್ತಿದೆ. 2028ರ ವೇಳೆಗೆ ಇದರ ಮೌಲ್ಯ 24.2 ಶತಕೋಟಿ ಡಾಲರ್‌ಗಳವರೆಗೆ ತಲುಪಲಿದೆ ಎಂದು ಅಂದಾಜಿಸಲಾಗಿದೆ.

ಕೃತಕ ಬುದ್ಧಿವಂತಿಕೆ ಬೆಳೆಯುತ್ತಿರುವ ರೀತಿಗೆ ಅನುಗುಣವಾಗಿ ಉದ್ಯಮಗಳೂ ಸಹ ತಮ್ಮ ಕಾರ್ಯನಿರ್ವಹಣೆ ಬದಲಿಸಿಕೊಳ್ಳುವ ಅವಶ್ಯಕತೆ ಇದೆ. ಉದ್ಯೋಗಿಗಳೂ ಸಹ ಎ.ಐ. ಆಧಾರಿತ ತಂತ್ರಜ್ಞಾನಕ್ಕೆ ಒಗ್ಗಿಕೊಳ್ಳಬೇಕಿದೆ. ಇಲ್ಲವಾದಲ್ಲಿ ಅವರ ಭವಿಷ್ಯದ ಮೇಲೆ ಪರಿಣಾಮವಾಗಲಿದೆ.

## ನಗರದಲ್ಲಿ ಇಂದು ನವಚೇತನ ಕಾನ್ವೆಂಟ್ ವಾರ್ಷಿಕೋತ್ಸವ

ದಾವಣಗೆರೆ, ಜ. 8- ಇಲ್ಲಿನ ನವಚೇತನ ಕಾನ್ವೆಂಟ್ (ಆಂಗ್ಲ ಮಾಧ್ಯಮ)ದ ವಾರ್ಷಿಕೋತ್ಸವ ಸಮಾರಂಭವು ನಾಳೆ ದಿನಾಂಕ 10ರ ಶುಕ್ರವಾರ ಶಾಲಾ ಆವರಣದಲ್ಲಿ ನಡೆಯಲಿದೆ ಎಂದು ಶಾಲಾ ಮುಖ್ಯಸ್ಥ ಕೆ.ಎಂ. ಜಯದೇವಯ್ಯ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. ಮುಖ್ಯ ಅತಿಥಿಗಳಾಗಿ ಡಿಡಿಪಿಐ ಜಿ.ಕೊಟ್ರೇಶ್, ಇನ್‌ಸೈಟ್ಸ್ ಸಂಸ್ಥಾಪಕ ವಿನಯ್ ಕುಮಾರ್ ಜಿ.ಬಿ., ಸಾಧಕರ ಮಾತು ಯೂಟ್ಯೂಬ್ ಚಾನಲ್ ವ್ಯವಸ್ಥಾಪಕ ನಿರ್ದೇಶಕರಾದ ಅಶ್ವಿನಿ ಗೌಡ ಆಗಮಿಸಲಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಸಂಸ್ಥೆಯ ಅಧ್ಯಕ್ಷ ನಾಗಲಿಂಗಪ್ಪ ಹೆಚ್.ಎಲ್., ಉಪಾಧ್ಯಕ್ಷ ಎನ್.ಜಿ. ಮಲ್ಲಿಕಾರ್ಜುನ, ಮುಖ್ಯ ಶಿಕ್ಷಕಿ ಅಫ್ರಿನ್ ಉನ್ನೀಸಾ ಇದ್ದರು.

# ಡಾ|| ಶಾಮನೂರು ಶಿವಶಂಕರಪ್ಪನವರನ್ನು ಭೇಟಿ ಮಾಡಿ ಯೋಗಕ್ಷೇಮ ವಿಚಾರಿಸಿದ ಎಸ್. ಬಸಪ್ಪನವರು



ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿರುವ ಹಿರಿಯ ಮುತ್ಸದ್ದಿಗಳು, ಶಾಸಕರಾದ **ಡಾ|| ಶಾಮನೂರು ಶಿವಶಂಕರಪ್ಪ**ನವರನ್ನು ನಗರಪಾಲಿಕೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷರಾದ **ಎಸ್.ಬಸಪ್ಪನವರು** ಹಾಗೂ ಅವರ ಧರ್ಮಪತ್ನಿ **ಶ್ರೀಮತಿ ನಾಗರತ್ನಮ್ಮನವರು** ಜ.9ರ ಗುರುವಾರ ಭೇಟಿ ಮಾಡಿ ಯೋಗಕ್ಷೇಮ, ಆರೋಗ್ಯ ವಿಚಾರಿಸಿದರು. ನಗರದೇವತೆ ಶ್ರೀ ದುರ್ಗಾಂಬಿಕಾ ದೇವಿಯ ಆಶೀರ್ವಾದದಿಂದ ಎಸ್ಸೆಸ್ ಅವರು ಶತಾಯುಷಿಗಳಾಗಲೆಂದು ಶುಭ ಕೋರಿದರು.

# ಇಂದು ವೈಕುಂಠ ಏಕಾದಶಿ ಒಂದು ಚಿಂತನೆ



ವೈಕುಂಠ ಎನ್ನುವುದು ಭಗವಂತನಾದ ವಿಷ್ಣುವಿನ ಮೂರು ಧಾಮಗಳಾದ ಅನಂತಸನ ಶ್ವೇತ ದ್ವೀಪ ಮತ್ತು ವೈಕುಂಠ ಇವುಗಳಲ್ಲಿ ಒಂದು. ಭಕ್ತರಾದವರಿಗೆ ಭಗವಂತನ ಧಾಮವನ್ನು ಸೇರುವುದೇ ಜೀವನದ ಪರಮ ಗುರಿ. ಅದೇ ಮೋಕ್ಷ.

ಭಕ್ತರು ಮಾಡಬೇಕಾದ ತಪಸ್ಸುಗಳಲ್ಲಿ ಒಂದು ಉಪವಾಸ. ಶ್ರೀಹರಿಯ ಭಕ್ತರು ಅವನ ಪ್ರೀತಿಗಾಗಿ ಪ್ರತಿ ತಿಂಗಳಿನ ಏಕಾದಶಿಯ ತಿಥಿಯಂದು ಉಪವಾಸ ಮಾಡುತ್ತಾರೆ. ಉಪವಾಸ ಎಂದರೆ ಹತ್ತಿರದಲ್ಲಿ ವಾಸ, ಎಂದರೆ ನಮ್ಮ ಮನಸ್ಸು ಭಗವಂತನ ನಿರಂತರ ನೆನೆಯುತ್ತಾ ಅವನನ್ನು ಬಿಟ್ಟು ಬೇರೆ ಏನೂ ಬೇಡ ಎಂಬ ದೃಢ ನಿರ್ಧಾರದಿಂದ ಅಂದು ಆಹಾರವನ್ನು ಸ್ವೀಕರಿಸದೆ ವ್ರತವನ್ನು ಮಾಡಬೇಕು. ಇದರ ಜೊತೆಗೆ ಜಾಗರಣೆಯನ್ನೂ ಮಾಡಬೇಕು ಎಂಬ ನಿಯಮವಿದೆ.

ಒಂದು ವರ್ಷಕ್ಕೆ 24 ಏಕಾದಶಿಗಳು ಬರುತ್ತವೆ. ಅದರಲ್ಲಿ ವೈಕುಂಠ ಏಕಾದಶಿಗೆ ಅತ್ಯಂತ ಮಹತ್ವವಿದೆ. ಅಂದು ಉಪವಾಸವಿದ್ದರೆ 23 ಏಕಾದಶಿಗಳ ದಿನ ಉಪವಾಸವಿದ್ದಷ್ಟು ಫಲ ಬರುತ್ತದೆ ಎಂಬ ನಂಬಿಕೆ ಇದೆ.

ಏಕಾದಶಿಗೆ ಇರುವ ಪದ್ಮಪುರಾಣದ ಕಥೆ ಏನೆಂದರೆ, ಮುರಾಸುರನ ಸಂಹಾರ ಮಾಡಲು, ತನ್ನ ಯೋಗ ಮಾಯೆಗೆ ಆಜ್ಞೆ ಕೊಡುತ್ತಾನೆ. ಅವಳು ಅವನನ್ನು ಸಂಹಾರ ಮಾಡಿದಾಗ ಸುಪ್ರೀತನಾದ ಭಗವಂತನು ಅವಳಿಗೆ ಏಕಾದಶಿ ಎಂಬ ಹೆಸರನ್ನು ಕೊಟ್ಟು ತಿಂಗಳ ಹನ್ನೊಂದನೆಯ ದಿನ ಆಚರಿಸಿದ ತನ್ನ ಭಕ್ತರ ಪಾಪಗಳನ್ನೆಲ್ಲ ನಾಶ ಮಾಡುವ ಶಕ್ತಿಯನ್ನು ಕೊಡುತ್ತಾನೆ.

ಭಾಗವತ ಪುರಾಣದಲ್ಲಿ ಏಕಾದಶಿಯ ವ್ರತವನ್ನು ನಿಷ್ಠೆಯಿಂದ ಆಚರಿಸಿದ ಅಂಬರೀಶನ ಕಥೆ ಬರುತ್ತದೆ. ದ್ವಾದಶಿಯ ದಿನ ಬಂದ ದೂರ್ವಾಸ ಮುನಿಗಳು ಸ್ನಾನ ಮಾಡಿ ಹಿಂದಿರುಗಿ ಬರುವಷ್ಟರಲ್ಲಿ ದ್ವಾದಶಿಯ ಮುಹೂರ್ತ ಮೀರಿ ಹೋಗುತ್ತದೆ ಎಂದು ಅಂಬರೀಶನು ಒಂದು ಹನಿ ನೀರನ್ನು ಸ್ವೀಕರಿಸುತ್ತಾನೆ. ಇದರಿಂದ ಸಿಟ್ಟಾದ ದೂರ್ವಾಸರು ತಮ್ಮ ಕೂದಲಿನಿಂದ ಒಂದು ಚಕ್ರವನ್ನು ಮಾಡಿ ಅವನ ಮೇಲೆ ಪ್ರಯೋಗಿಸುತ್ತಾರೆ. ಆದರೆ ಅವನ ಭಕ್ತಿಯಿಂದ ಸುದರ್ಶನ ಚಕ್ರವೂ ಅವನನ್ನು ಕಾಪಾಡಿ, ಆ ಚಕ್ರವನ್ನು ನಾಶ ಮಾಡಿ ದೂರ್ವಾಸರ ಬೆನ್ನಟ್ಟುತ್ತದೆ. ಬ್ರಹ್ಮ ಶಿವ ಮತ್ತು ನಾರಾಯಣರು ಕೂಡ ಅವನನ್ನು ಅದರಿಂದ ರಕ್ಷಿಸಲು ಸಾಧ್ಯವಾಗುವುದಿಲ್ಲ. ಆಗ ಶ್ರೀ ಹರಿಯು ತನ್ನ ಭಕ್ತ ಅಂಬರೀಶನ ಬಳಿಗೆ ಹೋಗಲು ಹೇಳುತ್ತಾನೆ. ಅಂಬರೀಶನು ಅವರನ್ನು ಕ್ಷಮಿಸಿ ಸುದರ್ಶನಕ್ಕೆ ಪ್ರಾರ್ಥನೆ ಮಾಡಿಕೊಂಡಾಗ ಅದು ಹಿಂದಿರುಗುತ್ತದೆ.

ಹೀಗೆ ಏಕಾದಶಿ ವ್ರತವು ಭಕ್ತನಿಗೆ ಭಗವಂತನ ಕಾರುಣ್ಯವನ್ನು ನೀಡುವುದರ ಜೊತೆಗೆ ಭಗವಂತನ ಧಾಮಕ್ಕೆ ಕರೆದುಕೊಂಡು ಹೋಗುತ್ತದೆ.

**ವೈಜ್ಞಾನಿಕವಾಗಿ :** 2016ರಲ್ಲಿ ಯೋಶಿನೋರಿ ಓಷುಮಿ ಎಂಬ ವಿಜ್ಞಾನಿಗೆ ನೊಬೆಲ್ ಬಹುಮಾನ ದೊರಕಿತು.ಅವನು 12 ರಿಂದ 24 ಗಂಟೆಗಳ ಕಾಲ ಉಪವಾಸವಿದ್ದರೆ, ನಮ್ಮ ದೇಹದ ಕೆಟ್ಟ ಕಣಗಳು, ತಮಷ್ಟಕ್ಕೆ ತಾವೇ ನಾಶ ಹೊಂದುತ್ತವೆ. ಇದಕ್ಕೆ ಆಟೋಫೇಜಿ ಎಂಬ ಹೆಸರಿದೆ. ಇದರಿಂದ ದೇಹದ ಆರೋಗ್ಯವಂತ ಕಣಗಳು ಬೆಳೆಯಲು ಅನುಕೂಲವಾಗುತ್ತದೆ. ರೋಗ ನಿರೋಧಕ ಶಕ್ತಿ ಹೆಚ್ಚಿ, ಆಯುರ್ವೃದ್ಧಿ ಆಗುತ್ತದೆ.

ಇದು ಒಂದಾದರೆ, ನಮಗೆ ತಿಳಿದಿರುವಂತೆ, ಅಮಾವಾಸ್ಯೆ ಮತ್ತು ಹುಣ್ಣಿಮೆಗಳೆಂದು, ಚಂದ್ರನು ಭೂಮಿಗೆ ಹತ್ತಿರ ಬರುವುದರಿಂದ ಸಮುದ್ರದ ಅಲೆಗಳು ಏಳುತ್ತವೆ, ಭೂಮಿಯ ಮೇಲಿರುವ ಗಾಳಿಯ ಒತ್ತಡದಲ್ಲಿ ಏರುಪೇರು ಆಗುತ್ತದೆ. ಏಕಾದಶಿಯ ದಿನದಂದು ಗಾಳಿಯ ಒತ್ತಡ ಬಹಳ ಕಡಿಮೆ ಇರುವುದರಿಂದ ಉಪವಾಸ ಮಾಡಲು ಸೂಕ್ತವಾದ ಸಮಯವಾಗಿದೆ ಹಾಗೂ ಅಂದು ಊಟ ಮಾಡದ ಆಹಾರದ ಶಕ್ತಿ ನಮ್ಮ ಮೆದುಳನ್ನು ತಲುಪಲು ಎರಡು ದಿನ ಬೇಕಾಗಿರುವುದರಿಂದ, ಅಮಾವಾಸ್ಯೆ ಮತ್ತು ಹುಣ್ಣಿಮೆಗಳಂದು, ನಮ್ಮ ಮೆದುಳು ಹಗುರವಾಗಿರುತ್ತದೆ. ಮಾನಸಿಕ ಉದ್ವೇಗಗಳು ಕೂಡ ಕಡಿಮೆಯಾಗುತ್ತದೆ ಎಂದು ಸಂಶೋಧನೆಗಳು ತಿಳಿಸಿವೆ .

ಇಷ್ಟಲ್ಲದೆ ಉಪವಾಸವಿರುವುದರಿಂದ ದೇಹವು ಕಲ್ಮಶಗಳಿಂದ ದೂರವಾಗುತ್ತದೆ. ಭಗವಂತನ ಚಿಂತನೆ ಮಾಡಲು ಏಕಾಗ್ರತೆಯೂ ಹೆಚ್ಚುತ್ತದೆ. ದೇಹದ ತೂಕವನ್ನು ಇಳಿಸಲು ಕೂಡ ಉಪವಾಸಗಳು ಉಪಯುಕ್ತ ಎಂದು ತಿಳಿದುಬಂದಿದೆ.

ಇಷ್ಟಲ್ಲದೆ ನಾವು ನಮ್ಮ ಆಸೆ, ಚಪಲಗಳನ್ನು ಎಷ್ಟರಮಟ್ಟಿಗೆ ತಡೆಗಟ್ಟಬಹುದು ಎಂಬುದನ್ನು ಕೂಡ, ನಮಗೆ ತಿಳಿಸಿಕೊಡುತ್ತವೆ. ತನ್ನ ಇಂದ್ರಿಯ ಚಪಲಗಳನ್ನು ಗೆದ್ದವನು ಮಾತ್ರ ಭಗವಂತನನ್ನು ಸೇರಲು ಸಾಧ್ಯ.

ಎಲ್ಲ ಸಂಪ್ರದಾಯಗಳಲ್ಲೂ ಕೂಡ ಉಪವಾಸಗಳು ಇವೆ. ಹಿಂದೂ ಸಂಪ್ರದಾಯದಲ್ಲಿ ಏಕಾದಶಿಗೆ ಬಹಳ ಮಹತ್ವವಾದ ಸ್ಥಾನವಿದೆ.

**ವೈಕುಂಠದ ದ್ವಾರ :** ಮಾರ್ಗಶಿರ ಮಾಸದಲ್ಲಿ ಬರುವ ಈ ವೈಕುಂಠ ಏಕಾದಶಿ ದಿನದಂದು ಶ್ರೀನಿವಾಸ ದೇವರ ದೇವಸ್ಥಾನಗಳಲ್ಲಿ, ಮುಖ್ಯವಾಗಿ ತಮಿಳುನಾಡಿನ ಶ್ರೀರಂಗಂ ಮತ್ತು ತಿರುಪತಿಯ ದೇವಸ್ಥಾನಗಳಲ್ಲಿ, ವೈಕುಂಠದ ಬಾಗಿಲು ಎಂದು ಮಾಡಿರುವ ದ್ವಾರವನ್ನು ತೆಗೆಯುತ್ತಾರೆ. ಅಂದು ಭಗವಂತನು ಅತ್ಯಂತ ಕರುಣೆಯಿಂದ ಭಕ್ತರನ್ನು ನೋಡುತ್ತಾನೆ, ತನ್ನಧಾಮವನ್ನು ಕೊಡುತ್ತಾನೆ ಎಂಬ ನಂಬಿಕೆ ಇದೆ. ಆ ದ್ವಾರದಿಂದ ಭಕ್ತರು ಹೊರಗೆ ಬಂದು ಧನ್ಯತೆಯನ್ನು ಕಾಣುತ್ತಾರೆ. ಎಲ್ಲಾ ವೆಂಕಟೇಶ್ವರ ದೇವಸ್ಥಾನಗಳಲ್ಲೂ ವೈಕುಂಠ ಏಕಾದಶಿಯ ದಿನ ವೈಕುಂಠದ ದ್ವಾರವನ್ನು ತೆಗೆಯಲಾಗುತ್ತದೆ.

'ಸಾಧನ ಶರೀರವಿದು ನೀ ದಯದಿ ಕೊಟ್ಟದ್ದು ಸಾಧಾರಣವೆಲ್ಲ ಸಾಧು ಪ್ರಿಯನೇ' ಎಂದು ಪುರಂದರ ದಾಸರು ಹಾಡಿದ್ದಾರೆ, '84 ಲಕ್ಷ ಜೀವ ರಾಶಿಯನ್ನು ದಾಟಿ ಬಂದ ಈ ಶರೀರ ತಾನಲ್ಲ ತನ್ನದಲ್ಲ' ಎಂದು ಕನಕದಾಸರು ಹಾಡಿದ್ದಾರೆ. ಉಪವಾಸವೇ ಒಂದು ಸಾಧನೆಯ ಮಾರ್ಗ. ಈ ವೈಕುಂಠ ಏಕಾದಶಿಯ ದಿನ ಭಗವಂತನ ಗುಣಗಾನವನ್ನು ಮಾಡುತ್ತಾ, ಉಪವಾಸವನ್ನು ಆಚರಿಸಿ, ದರ್ಶನವನ್ನು ಪಡೆದು ಧನ್ಯರಾಗೋಣ ಎಂದು ಪ್ರಾರ್ಥಿಸುತ್ತೇನೆ.

**- ಡಾ. ರೂಪಶ್ರೀ ಶಶಿಕಾಂತ್**, ದಾವಣಗೆರೆ.

### ಬಂದಿದೆ ವೈಕುಂಠ ಏಕಾದಶಿ

ಬಂದಿದೆ ವೈಕುಂಠ ಏಕಾದಶಿ
ಬಂದಿದೆ ಮೋಕ್ಷದ ಏಕಾದಶಿ

ಚೆಂದದ ಉಪವಾಸ ಮಾಡೋಣ
ನಂದದಾನಂದನ ನೋಡೋಣ

ಪಾಪವೆಲ್ಲವನು ಕಳೆಯುವುದು
ತಾಪತ್ರಯಗಳ ಇಳಿಸುವುದು
ಆಪತ್ಬಾಂಧವನ ಬಳಿ ಸೇರಿಸಿ
ಆಪತ್ತುಗಳಿಂದ ರಕ್ಷಿಸುವುದು

ವೈಕುಂಠ ಪತಿಯ ದರ್ಶನ ಮಾಡಿ
ವೈಕುಂಠದ ಬಾಗಿಲಡಿ ಸಾಗಿ
ವೈಕುಂಠಕೆ ಸೇರುವ ಸಂಕಲ್ಪ ಮಾಡಿ
ವೈಕುಂಠಾಧಿಪತಿಗೆ ಶರಣಾಗೋಣ

ಉಪವಾಸ ಭಜನೆ ಸಂಕೀರ್ತನೆ
ತಪದಂಥ ಸಾಧನೆ ಮಾಡೋಣ
ಕಪಟವಿಲ್ಲದ ಭಕ್ತಿ ಮಾಡುತ್ತಾ
ಅಪರೋಕ್ಷ ಪಡೆಯಲು ಬಾಳೋಣ

ಸಿರಿಹರಿ ಬಾಲಗೋಪಾಲವಿಠಲನ
ಪರಿಪೂರ್ಣವಾಗಿ ಸ್ಮರಿಸೋಣ
ಪರಿಪರಿ ಯೋಚನೆ ಬಿಟ್ಟು ಅವನ
ಪರಮ ಪಾದವನು ಹಿಡಿಯೋಣ

# ಬಳ್ಳಾರಿಯಲ್ಲಿ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ : ಶಾಸಕರಿಗೆ ಮನವಿ



**ಹರಪನಹಳ್ಳಿ**

ಹರಪನಹಳ್ಳಿ, ಜ. 9 - 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಗಡಿನಾಡು ಬಳ್ಳಾರಿಯಲ್ಲಿ ಆಯೋಜಿಸಲು ರಾಜ್ಯ ಸಮಿತಿಗೆ ಮನವಿ ಪತ್ರ ಕೊಟ್ಟು ಸಹಕಾರ ನೀಡಿದ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ ಅವರಿಗೆ ಅಖಂಡ ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ನಿಷ್ಠಿ ರುದ್ರಪ್ಪ ಹಾಗೂ ಹರಪನಹಳ್ಳಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಕೆ.ಉಚ್ಚೆಂಗೆಪ್ಪ ಶಾಸಕರಿಗೆ ಸನ್ಮಾಸಿ, ಈ ಸಮ್ಮೇಳನಕ್ಕೆ ಸಹಕಾರ ನೀಡುವಂತೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಶಾಸಕರಾದ ಲತಾ ಮಲ್ಲಿಕಾರ್ಜುನ ಮಾತನಾಡಿ, ಸುದೀರ್ಘ 66 ವರ್ಷಗಳ ಬಳಿಕ ಬಳ್ಳಾರಿಗೆ ಸಾಹಿತ್ಯ ಸಮ್ಮೇಳನ ನಡೆಸುವ ಆತಿಥ್ಯ ಸಿಕ್ಕಿರುವುದು ನಮ್ಮೆಲ್ಲರ ಸೌಭಾಗ್ಯ. ಸಾಹಿತ್ಯ ಸಮ್ಮೇಳನದ ಯಶಸ್ವಿಗೆ ನಮ್ಮ ಸಂಪೂರ್ಣ ಸಹಕಾರ ಇದೆ ಎಂದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಮಾಜಿ ಅಧ್ಯಕ್ಷ ಡಿ.ರಾಮನಮಲಿ, ಎಚ್. ಮಲ್ಲಿಕಾರ್ಜುನ, ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಜಿ.ಮಹದೇವಪ್ಪ, ಗೌರವ ಕೋಶಾಧಿಕಾರಿ ಕೆ.ರಾಘವೇಂದ್ರ ಶೆಟ್ಟಿ, ಚಿಗಟೇರಿ ಕನ್ನಡ ಸಾಹಿತ್ಯ ಪರಿಷತ್ತು ಹೋಬಳಿ ಘಟಕದ ಅಧ್ಯಕ್ಷ ಸಿ.ರಾಮನಗೌಡ, ತೆಲಿಗಿ ಕನ್ನಡ ಸಾಹಿತ್ಯ ಪರಿಷತ್ತು ಹೋಬಳಿ ಘಟಕದ ಅಧ್ಯಕ್ಷ ಕೆ.ಎಸ್. ವೀರಭದ್ರಪ್ಪ. ಅರಸೀಕೆರೆ ಕನ್ನಡ ಸಾಹಿತ್ಯ ಪರಿಷತ್ತು ಹೋಬಳಿ ಘಟಕದ ಅಧ್ಯಕ್ಷ. ಎಂ.ಸುರೇಶ, ಮುಖಂಡ ಹೇಮಣ್ಣ ಮೋರಗೇರಿ, ಲಾಟಿ ದಾದಪೀರ್. ಅರಸೀಕೇರಿ ಜಾವೀದ್ ಸೇರಿದಂತೆ ಇತರರು ಇದ್ದರು.

## ಪ್ರಿಯಾಂಕ್ ಖರ್ಗೆ ವಿರುದ್ಧ ಅನಗತ್ಯ ಅಪಪ್ರಚಾರ

ದಾವಣಗೆರೆ, ಜ. 9- ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ನಾಯಕರು ಅಪಪ್ರಚಾರ ಮಾಡುವುದನ್ನು ಕೈಬಿಡಬೇಕು ಎಂದು ಜಿಲ್ಲಾ ಛಲವಾದಿ ಮಹಾಸಭಾ ಆಗ್ರಹಿಸಿದೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ಅಧ್ಯಕ್ಷ ಎನ್.ರುದ್ರಮುನಿ, ಅನೇಕ ರಾಜಕೀಯ ಮುಖಂಡರು ಪ್ರಿಯಾಂಕ ಖರ್ಗೆ ಅವರ ಏಳ್ಗೆ ಸಹಿಸದೇ ಅನಗತ್ಯವಾಗಿ ಆಧಾರ ರಹಿತ ಹಾಗು ಅವಹೇಳನಕಾರಿಯಾಗಿ ಮಾತನಾಡುತ್ತಾ, ಅವರ ತೇಜೋವಧೆ ಮಾಡಲು ಯತ್ನಿಸುತ್ತಿದ್ದಾರೆ ಎಂದರು. ಕೂಡಲೇ ಪ್ರಿಯಾಂಕ ಖರ್ಗೆ ವಿರುದ್ಧ ಅನಗತ್ಯ ಹೇಳಿಕೆ ನಿಲ್ಲಿಸಬೇಕು. ಇಲ್ಲದಿದ್ದರೆ ಸಮಾಜವು ಉಗ್ರ ಪ್ರತಿಭಟನೆ ಮಾಡುತ್ತದೆ ಎಂದು ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರುಗಳಾದ ಎಸ್.ಶೇಖರಪ್ಪ, ಜಗನ್ನಾಥ್, ಸಾರಥಿ ಬಸವರಾಜು, ಹೆಚ್. ಗಿರೀಶ್, ಅರುಣ್ ಕುಮಾರ್, ರೇವಣಸಿದ್ದಪ್ಪ, ಕೆ.ಶಿವಕುಮಾರ್, ಅವಿನಾಶ್ ಇದ್ದರು.

## ಬ್ರಿಡ್ಜ್ : ಗ್ರಾಮಸ್ಥರ ಆಗ್ರಹ



**(1ನೇ ಪುಟದಿಂದ)** ಮಂಜಪ್ಪ, ಮಾಲತೇಶ್, ಜಿಮ್ಮಿ ಹನುಮಂತಪ್ಪ, ಮಿಟ್ಲಕಟ್ಟೆ ಚಂದ್ರಪ್ಪ, ಡಿ.ಎಸ್.ಎಸ್. ಮಂಜುನಾಥ್, ಡಿ.ಜಿ. ಪ್ರಕಾಶ್, ಅಣ್ಣಪ್ಪ, ಗದಿಗೆಪ್ಪ, ಮಧುನಾಗರಾಜ್, ದಯಾನಂದ್, ಜೆ.ಸಿ. ದೇವರಾಜ್, ರಮೇಶ್ ಸೇರಿದಂತೆ ಗ್ರಾಮಸ್ಥರು ಇದ್ದರು.

## ನಗರದ ಲಯನ್ಸ್ ಭವನದಲ್ಲಿ ಉಪನ್ಯಾಸ



**'ಸಾಫ್ಟ್‌ವೇರ್ ವರ್ಲ್ಡ್' ಕುರಿತು ಕೆ.ಎಸ್. ಸಂತೋಷ್ ಉಪನ್ಯಾಸ**

ದಾವಣಗೆರೆ, ಜ. 9- ನಗರದ ಲಯನ್ಸ್ ಭವನದಲ್ಲಿ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಲಯನ್ಸ್ ಕ್ಲಬ್ ನಿರ್ದೇಶಕ ಕೆ.ಎಸ್. ಸಂತೋಷ್ 'ಸಾಫ್ಟ್‌ವೇರ್ ವರ್ಲ್ಡ್' ವಿಷಯದ ಕುರಿತು ಮಾತನಾಡಿದರು.

ಕಂಪ್ಯೂಟರ್‌ಗಳು ಮತ್ತು ಸ್ಮಾರ್ಟ್ ಫೋನ್‌ಗಳು ನಮ್ಮ ಜೀವನದ ಪ್ರಮುಖ ಭಾಗವಾಗಿರುವ ಬಗ್ಗೆ ವಿವರಿಸಿದರಲ್ಲದೆ, ಕಂಪ್ಯೂಟರ್‌ನ ಇತಿಹಾಸದ ಬಗ್ಗೆ ತಿಳಿಸಿಕೊಟ್ಟರು. ಇದಲ್ಲದೇ ಇತ್ತೀಚಿನ ದಿನಗಳಲ್ಲಿನ ಸೈಬರ್ ಅಟ್ಯಾಕ್ಸ್ ಪ್ರಕರಣಗಳು ಹೆಚ್ಚಾಗಿರೋ ಬಗ್ಗೆ ಕಳವಳ ವ್ಯಕ್ತಪಡಿಸುತ್ತಾ, ಇದರ ಬಗ್ಗೆ ಜಾಗೃತಿ ವಹಿಸುವುದು ಅವಶ್ಯಕವಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಕೆ.ಎಸ್. ಸಂತೋಷ್ ಅವರಿಗೆ ಸನ್ಮಾನಿಸಿ, ಗೌರವಿಸಲಾಯಿತು. ಲಯನ್ಸ್ ಅಧ್ಯಕ್ಷ ಎಸ್.ಜಿ. ಉಳವಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಸಿ. ಅಜಯ್‌ನಾರಾಯಣ್, ಖಜಾಂಚಿ ಎಸ್. ನಾಗರಾಜ್, ಸಹ ಕಾರ್ಯದರ್ಶಿ ಹೆಚ್.ಎಂ. ನಾಗರಾಜ್, ಲಯನ್ಸ್ ಸದಸ್ಯರು ಉಪಸ್ಥಿತರಿದ್ದರು.

## ನಗರಕ್ಕೆ ನಾಳೆ ಹೈಕೋರ್ಟ್ ಜಡ್ಜ್ ಕೃಷ್ಣ ಎಸ್. ದೀಕ್ಷಿತ್



ದಾವಣಗೆರೆ, ಜ. 9 - ನಗರದ ಆರ್. ಎಲ್. ಕಾನೂನು ಕಾಲೇಜಿನಲ್ಲಿ ನಾಡಿದ್ದು ದಿನಾಂಕ 11 ರಂದು ಬೆಳಗ್ಗೆ 11ಕ್ಕೆ ಆಯೋಜಿಸಿರುವ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರು ಕಾನೂನು ಮತ್ತು ಧರ್ಮ ಕುರಿತು ಉಪನ್ಯಾಸ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಪ್ರಧಾನ ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್.ಅರುಣ ಕುಮಾರ್, ಹೈಕೋರ್ಟ್ ವಕೀಲ ಎಂ.ಆರ್. ಹಿರೇಮಠದ್ ಭಾಗವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯ ಡಾ.ಜಿ. ಎಸ್.ಯತೀಶ್ ವಹಿಸಲಿದ್ದಾರೆ. ಟಿ.ವಿದ್ಯಾಧರ ವೇದವರ್ಮ ಇತರರು ಆಗಮಿಸಲಿದ್ದಾರೆ ಎಂದು ಆರ್.ಎಲ್.ಕಾನೂನು ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಪ್ರದೀಪ್ ತಿಳಿಸಿದ್ದಾರೆ.

# ಸಿಎಂ, ಡಿಸಿಎಂ ಸೇರಿ ಪ್ರಮುಖ ಸಚಿವರು 14ಕ್ಕೆ ದೆಹಲಿಗೆ

**ಹೈಕಮಾಂಡ್ ಬುಲಾವ್**

ಬೆಂಗಳೂರು,ಜ.9- ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಪ್ರಮುಖ ಸಚಿವರಿಗೆ ಕಾಂಗ್ರೆಸ್ ಹೈಕಮಾಂಡ್ ಬುಲಾವ್ ಮಾಡಿದೆ. ವರಿಷ್ಠರ ಆಹ್ವಾನದ ಮೇರೆಗೆ ಇದೇ 14 ರಂದು ಇವರುಗಳು ದೆಹಲಿಗೆ ತೆರಳಲಿದ್ದಾರೆ.

ಇದೇ 15ರಂದು ದೆಹಲಿಯಲ್ಲಿ ಎಐಸಿಸಿಯ ನೂತನ ಕಟ್ಟಡ ಉದ್ಘಾಟನೆ ನಡೆಯಲಿದ್ದು, ಈ ಕಾರ್ಯ ಕ್ರಮದಲ್ಲಿ ಭಾಗವಹಿಸುವಂತೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಆಹ್ವಾನ ನೀಡಿದ್ದಾರೆ.

ದೆಹಲಿ ಭೇಟಿ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿ ಹಾಗೂ ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದ ಸಚಿವರುಗಳ ನಡುವಿನ ಭಿನ್ನಾಭಿಪ್ರಾಯ ಬಗೆಹರಿಸುವ ಸಭೆಯೂ ನಡೆಯಲಿದೆ. ಜನವರಿ 7ರಂದೇ ಮುಖ್ಯಮಂತ್ರಿ ಹಾಗೂ ಅವರ ಬೆಂಬಲಿತ ಸಚಿವರು ದೆಹಲಿಗೆ ತೆರಳಬೇಕಿತ್ತು, ಆದರೆ, ವರಿಷ್ಠರು ಕಡೇ ಗಳಿಗೆಯಲ್ಲಿ ಭೇಟಿ ರದ್ದುಪಡಿಸಿದ್ದರು.

ಔತಣಕೂಟದ ಸಭೆಗಳಿಂದ ಸರ್ಕಾರ ಮತ್ತು ಪಕ್ಷಕ್ಕೆ ಮುಜುಗರವಾಗುತ್ತದೆ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ.ಶಿವಕುಮಾರ್ ವರಿಷ್ಠರಿಗೆ ದೂರು ಸಲ್ಲಿಸಿದ್ದರು. ದೆಹಲಿ ಪ್ರವಾಸ ಸಂದರ್ಭದಲ್ಲಿ ಈ ವಿಚಾರದ ಬಗ್ಗೆಯೂ ಚರ್ಚೆ ನಡೆಯಲಿದೆ ಎನ್ನಲಾಗಿದೆ.

ವಿಧಾನ ಪರಿಷತ್ತಿನ ನಾಲ್ಕು ಸ್ಥಾನಗಳಿಗೆ ನಾಮಕರಣ, ಸಂಪುಟ ಪುನರ್ ರಚನೆಗೆ ಸಂಬಂಧಿಸಿದಂತೆ ಮುಖ್ಯ ಮಂತ್ರಿ ಅವರು ವರಿಷ್ಠರೊಂದಿಗೆ ಸಮಾಲೋಚನೆ ನಡೆಸಲಿದ್ದಾರೆ.

ಯಾರನ್ನು ನಾಮ ನಿರ್ದೇಶನ ಮಾಡಬೇಕೆಂಬ ಬಗ್ಗೆ ಬಹುತೇಕ ಪಟ್ಟಿ ಅಂತಿಮಗೊಳಿಸಿಕೊಂಡು ಮುಖ್ಯ ಮಂತ್ರಿ ಹಿಂತಿರುಗಲಿದ್ದಾರೆಂದು ಉನ್ನತ ಮೂಲಗಳು ತಿಳಿಸಿವೆ.

# ಸಿಸಿ ರಸ್ತೆ ಕಳಪೆ ಕಾಮಗಾರಿ ಸರಿಪಡಿಸಲು ಗುತ್ತಿಗೆದಾರನಿಗೆ ಸ್ಮಾರ್ಟ್ ಸಿಟಿ ಸೂಚನೆ

ದಾವಣಗೆರೆ, ಜ.9- ನಗರದ ಶಿವಕುಮಾರ ಸ್ವಾಮಿ ಬಡಾವಣೆಯ 1ನೇ ಹಂತದ 2ನೇ ಮುಖ್ಯ ರಸ್ತೆಯಲ್ಲಿ ಹೊಸದಾಗಿ ನಿರ್ಮಿಸುತ್ತಿರುವ ಸಿಸಿ ರಸ್ತೆಯ ಕಳಪೆ ಕಾಮಗಾರಿಯ ಬಗ್ಗೆ ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್ ಸ್ಪಷ್ಟೀಕರಣ ನೀಡಿದೆ.

**'ಸಿಸಿ ರಸ್ತೆ ಕಾಮಗಾರಿ ಕಳಪೆ :** ಸ್ಥಳೀಯರ ದೂರು' ಎಂಬ ಶೀರ್ಷಿಕೆಯಡಿ 'ಜನತಾವಾಣಿ' ಈ ಕುರಿತು ಸುದ್ದಿ ಪ್ರಕಟಿಸಿತ್ತು. ಸುದ್ದಿಯನ್ನು ಗಮನಿಸಿದ ದಾವಣಗೆರೆ ಸ್ಮಾರ್ಟ್ ಸಿಟಿಯು ಗುತ್ತಿಗೆದಾರರಿಗೆ ಕಳಪೆ ಸರಿಪಡಿಸಲು ಸೂಚನೆ ನೀಡಿದೆ.

ವೈಟ್ ಟಾಪಿಂಗ್ ಮಾದರಿಯ ಈ ರಸ್ತೆಯ ಕೆಲವು ಸ್ಥಳಗಳಲ್ಲಿ ಬಿರುಕುಗಳು ಕಂಡುಬಂದಿದ್ದು, ಸಮಸ್ಯೆ ಕುರಿತು ಐ.ಆರ್.ಸಿ ಮಾರ್ಗಸೂಚಿಯಲ್ಲಿ ಉಲ್ಲೇಖಿಸಿದಂತೆ ತಿದ್ದುಪಡಿ ಮಾಡಲು ಕಾಮಗಾರಿಯಲ್ಲಿ ಅಳವಡಿಸಿಕೊಳ್ಳಲಾಗುತ್ತಿದೆ ಎಂದು ತಿಳಿಸಿದೆ.

ರಸ್ತೆಯಲ್ಲಿ ಕಂಡುಬಂದಿರುವ ಬಿರುಕುಗಳನ್ನು ಐ.ಆರ್.ಸಿ ಮಾರ್ಗಸೂಚಿಯಂತೆ ಸರಿಪಡಿಸಲು ಸೂಚಿಸಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಉತ್ತಮ ಗುಣಮಟ್ಟದ ಕಾಮಗಾರಿಯನ್ನು ಪೂರ್ಣಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಅನುವು ಮಾಡಲಿದೆ ಎಂದು ಸ್ಮಾರ್ಟ್ ಸಿಟಿ ಲಿಮಿಟೆಡ್ ವ್ಯವಸ್ಥಾಪಕರು ತಿಳಿಸಿದ್ದಾರೆ.

## ಚಿತ್ರದುರ್ಗದಲ್ಲಿ 13ಕ್ಕೆ ಬ್ರಹ್ಮೋತ್ಸವ

ಮೆದೆಹಳ್ಳಿ ರಸ್ತೆಯಲ್ಲಿ ರುವ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ 25ನೇ ವರ್ಷದ 60 ದಿನಗಳ ಬ್ರಹ್ಮೋತ್ಸವವು ಆರಂಭಗೊಂಡಿದ್ದು, ಇದೇ ದಿನಾಂಕ 13ರವರೆಗೆ ನಡೆಯಲಿದೆ. ಮಾಲಾಧಾರಿಗಳಿಗೆ ದೇವಸ್ಥಾನದಲ್ಲಿ ಪ್ರತಿನಿತ್ಯ ಉಚಿತ ಅನ್ನದಾನ ಕಾರ್ಯಕ್ರಮ ಜರುಗಲಿದೆ. ದಿನಾಂಕ 13ರ ಸೋಮವಾರ ಸಂಜೆ 6ಕ್ಕೆ ನಗರದಲ್ಲಿ ಅಯ್ಯಪ್ಪ ಸ್ವಾಮಿಯ ಆಭರಣ ಮೆರವಣಿಗೆ ಆಯೋಜಿಸಿದೆ. ದಿನಾಂಕ 14 ರಂದು ಮಕರ ಸಂಕ್ರಮಣದ ಅಂಗವಾಗಿ ಸ್ವಾಮಿ ಸನ್ನಿಧಿಯಲ್ಲಿ ಲಕ್ಷ ದೀಪೋತ್ಸವ ನಡೆಯಲಿದೆ.

## 12ಕ್ಕೆ 25ನೇ ವರ್ಷದ ಶಬರಿಮಲೈ ಯಾತ್ರೆ

ಜಗಳೂರು, ಜ.9 - ತಾಲ್ಲೂಕಿನ ಪಲ್ಲಾಗಟ್ಟೆ ಎಲ್‌ಐಸಿ ರಂಗ ಮಂದಿರದಲ್ಲಿ ದಿನಾಂಕ 12ರ ಭಾನುವಾರ ಸಂಜೆ 4ಕ್ಕೆ 25ನೇ ವರ್ಷದ ಶ್ರೀ ಅಯ್ಯಪ್ಪ ಶಬರಿಮಲೈ ಯಾತ್ರೆ ಅದ್ದೂರಿ ಮೆರವಣಿಗೆ ನಡೆಯಲಿದೆ. ಸಂಜೆ 6ಕ್ಕೆ ಪಡಿ ಪೂಜೆ, ಭಜನಾ ಕಾರ್ಯಕ್ರಮ ಮತ್ತು ಅನ್ನ ಸಂತರ್ಪಣೆ ನಡೆಯಲಿದೆ. 13ರಂದು ಇರುಮುಡಿ ಹೊತ್ತು ಶಬರಿಮಲೈ ಯಾತ್ರೆ ಹೊರಡುವರು.

# ಹರಿಹರದಲ್ಲಿ ಜಕಣಾಚಾರಿ ಸಂಸ್ಮರಣೆ ದಿನ



ಹರಿಹರ, ಜ.9- ನಗರದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ, ರಾಷ್ಟ್ರೀಯ ಮತ್ತು ನಾಡ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಇಂದು ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಸಂಸ್ಮರಣೆ ದಿನ ಆಚರಿಸಲಾಯಿತು. ಈ ಸಂದರ್ಭದಲ್ಲಿ ವಿಶ್ವಕರ್ಮ ಸಮಾಜದ ಮುಖಂಡರು, ತಾಲ್ಲೂಕು ಕಚೇರಿ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಬಿಇಎ ಶಾಲೆಯಲ್ಲಿ ಇಂದು ಕಲಾ ಉತ್ಸವ

ನಿಜಲಿಂಗಪ್ಪ ಬಡಾವಣೆಯ ಬಾಪೂಜಿ ಬಿ.ಇ.ಎ ಹೈಯರ್ ಪ್ರೈಮರಿ ಸಿಬಿಎಸ್‌ಇ ಶಾಲೆಯಲ್ಲಿ ಇಂದು ಸಂಜೆ 5ಕ್ಕೆ ಕಲಾ ಉತ್ಸವ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ಬಿಇಎ ಪ್ರೌಢಶಾಲೆ ಉಪಧ್ಯಕ್ಷರೂ ಹಾಗೂ ಛೇರ್ಮನ್ ಶ್ರೀಮತಿ ಪುಷ್ಪಾ ಕೆ.ಜಿ., ಮುಖ್ಯ ಅತಿಥಿಗಳಾಗಿ ಡಾ. ಹೆಚ್.ವಿ. ವಾಮದೇವಪ್ಪ, ಪ್ರೊ. ವೈ. ವೃಷಭೇಂದ್ರಪ್ಪ ಹಾಗೂ ಪ್ರಾಂಶುಪಾಲರಾದ ಸತೀಶ ಹೆಚ್.ಎಸ್. ಉಪಸ್ಥಿತರಿರುವರು.


**ಸೈಟುಗಳು ಮಾರಾಟಕ್ಕಿವೆ**
ವಾಜಪೇಯಿ ಬಡಾವಣೆ ಪೂರ್ವ-ದಕ್ಷಿಣ ಕಾರ್ನರ್ 50×50, ಜೆ.ಹೆಚ್. ಪಟೇಲ್ ಬಡಾವಣೆ ಪೂರ್ವ 20×30, ಶಿವಪಾರ್ವತಿ ಬಡಾವಣೆ ಪಶ್ಚಿಮ 30×40, ಬನಶಂಕರಿ ಬಡಾವಣೆ ಪೂರ್ವ 40×60 (ಸಂಭ್ರಮ್ ಹೋಟೆಲ್ ಪಕ್ಕ), ಪಶ್ಚಿಮ 30×70 ಅಕ್ಕಪಕ್ಕ (60 ಅಡಿ ರಸ್ತೆಗೆ)
ಐಗೂರು ವಿಜಯಕುಮಾರ್
9945702495

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದುವಾಡ ಹತ್ತಿರ ಸುಶಿ ಕನ್‌ವೆನ್ಷನ್ ಹಾಲ್ ಹಿಂಭಾಗ ಹೊಸ ಬಡಾವಣೆಗಳಲ್ಲಿ 30x50 ಉತ್ತರ, 30x40 ಪಶ್ಚಿಮ, 30x5 ಪೂರ್ವ, 30x50 ಉತ್ತರ-ಪಶ್ಚಿಮ ಕಾರ್ನರ್.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ರಾತ್ರಿ ಶಿಫ್ಟ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ
ಖುದ್ದಾಗಿ ಜನತಾವಾಣಿ ಕಚೇರಿಯನ್ನು ಬೆಳಿಗ್ಗೆ 12 ರಿಂದ ಸಂಜೆ 5 ಗಂಟೆಯ ಒಳಗೆ ಸಂಪರ್ಕಿಸಿ

**ಪಾನಿಪುರಿ ಅಂಗಡಿಯಲ್ಲಿ ಕ್ಲೀನಿಂಗ್ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ**
ಮಧ್ಯಾಹ್ನ 3 ರಿಂದ ರಾತ್ರಿ 9 ರವರೆಗೆ
ಮೊ. 82176 84224

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
97315 12365

**ಭಟ್ಟರು ಬೇಕಾಗಿದ್ದಾರೆ**
ಹೋಟೆಲ್ ಹೊಯ್ಸಳ
HEBBAL Toll ಹತ್ತಿರ
ವೆಜ್ & ನಾನ್‌ವೆಜ್
ಅಡುಗೆ ಮಾಡಲು ಭಟ್ಟರು ಬೇಕಾಗಿದ್ದಾರೆ.
99003 66782

**ಸೈಟುಗಳು ಮಾರಾಟಕ್ಕಿವೆ**
ಎಸ್.ಎಸ್. 'ಎ' ಬ್ಲಾಕ್ (ಕವಿ ಹೋಟೆಲ್ ಹತ್ತಿರ) ದಕ್ಷಿಣ 30×50, KHB ಕಾಲೋನಿ (ಜಡ್ಜ್ ಮನೆ ಪಕ್ಕ, ಡಬ್ಬಲ್ ರೋಡ್ ಮತ್ತು ಸರ್ಕಲ್ ಹತ್ತಿರ) ಉತ್ತರ 50×80, ಹೊಸಕುಂದುವಾಡ ಸುಶೀ ಕಲ್ಯಾಣ ಮಂಟಪ ಹಿಂಭಾಗ ದಕ್ಷಿಣ 30×40.
ಐಗೂರು ವಿಜಯಕುಮಾರ್
9945702495

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯ ಪಕ್ಕ, ಗೀತಂ ಕಾಲೇಜ್ ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x40 ಪೂರ್ವ, 28x30 ಪಶ್ಚಿಮ ಅಕ್ಕ-ಪಕ್ಕ 60 ಅಡಿ ರಸ್ತೆಗೆ 30x40 ಪಶ್ಚಿಮ, 30x50 ಪಶ್ಚಿಮ, 30x40 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆ ಬಾಡಿಗೆಗೆ ಇದೆ**
2BHK, ಬೋರ್‌ವೆಲ್ ಇದೆ. #174/A, ಸಿ ಬ್ಲಾಕ್, 3ನೇ ಮೇನ್, 6ನೇ ಕ್ರಾಸ್, ದೇವರಾಜ್ ಅರಸ್ ಬಡಾವಣೆ, ದಾವಣಗೆರೆ.
98442 15950

**WANTED**
Banking Sector
Tele Caller (Female only)
Qualification : Any Degree
85500 23110
Interview time : 11 am

**ಅಡಿಕೆ ತೋಟ ಮಾರಾಟಕ್ಕಿದೆ**
1) 6½ ಎಕರೆ, 5½ ವರ್ಷದ ಗಿಡ.
2) 4½ ಎಕರೆ, 4 ವರ್ಷದ ಗಿಡ.
3) 8 ಎಕರೆ, 9 ವರ್ಷದ ಗಿಡ.
ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ
ಏಜೆಂಟರು
8123115137

**ARTIFICIAL INTELIGENCE (AI)**
Age Group : 11 Years to 18 Yrs
BRUIT SOLUTIONS
Nijalingappa Badavane
96201 53806

**ಬೇಕಾಗಿದ್ದಾರೆ**
ಫೋಟೋಶಾಪ್‌ನಲ್ಲಿ ಅನುಭವವಿರುವ ಕಂಪ್ಯೂಟರ್ ಆಪರೇಟರ್ ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು. ಸಂಪರ್ಕಿಸಿ
8123076505
9113634113

**ಮಳಿಗೆ ಬಾಡಿಗೆಗೆ ಇದೆ**
ತರಳಬಾಳು ಬಡಾವಣೆ, ಮಾಗನೂರು ಬಸಪ್ಪ ಶಾಲೆಯ ಎದುರು, 15x11.5 ಅಡಿ ಅಳತೆಯ ಮಳಿಗೆ ಬಾಡಿಗೆಗೆ ಇದೆ.
99016 32462

**ತಕ್ಷಣ ಬೇಕಾಗಿದ್ದಾರೆ**
ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಸರ್ವೀಸ್ ಸೆಂಟರ್‌ನಲ್ಲಿ ತರಬೇತಿಗೆ ಹಾಗೂ ಕೆಲಸಕ್ಕೆ ಬೇಕಾಗಿದ್ದಾರೆ, SSLC ಪಾಸ್ ಅಥವಾ ಫೇಲ್, ITI, Diploma ಆದ ಸ್ವಂತ ದ್ವಿಚಕ್ರ ವಾಹನ ಹೊಂದಿರತಕ್ಕದ್ದು,
Ph. 9986394387, 08192-230103
3 ಸ್ಟಾರ್ ಎಲೆಕ್ಟ್ರಾನಿಕ್ಸ್
ಲಾಯರ್ ರೋಡ್, HP ಗ್ಯಾಸ್ ಏಜೆನ್ಸಿ ಎದುರು ಕೆ.ಬಿ. ಬಡಾವಣೆ ದಾವಣಗೆರೆ-577002.

**ಮನೆ ಬಾಡಿಗೆಗೆ ಇದೆ**
2BHK, ಬೋರ್‌ವೆಲ್ ಇದೆ. #174/A, ಸಿ ಬ್ಲಾಕ್, 3ನೇ ಮೇನ್, 6ನೇ ಕ್ರಾಸ್, ದೇವರಾಜ್ ಅರಸ್ ಬಡಾವಣೆ, ದಾವಣಗೆರೆ.
98442 15950

**ಹೋಟೆಲ್ ಫುಡ್ಡೀಸ್**
ಪಾರ್ಟ್ ಟೈಂ / ಫುಲ್ ಟೈಂ ವೈಟರ್‌ಗಳು, ಸ್ಟೀವರ್ಡ್ ಬೇಕಾಗಿದ್ದಾರೆ
ಚರ್ಚ್ ರೋಡ್, ತೊಗಟವೀರ ಕಲ್ಯಾಣ ಮಂಟಪದ ಹತ್ತಿರ, ದಾವಣಗೆರೆ-4.
98861 56688

**WANTED**
Sales Men
Delivery Boy's
for Colgate Palmolive
Veeranarayana Traders, Davangere.
98860 97065

**ಬೇಕಾಗಿದ್ದಾರೆ**
SSLC ಪಾಸ್/ ಫೇಲಾಗಿರುವವರು ಸೇಲ್ಸ್ ಮನ್ ಹಾಗೂ ಡಿಲೆವರಿ ಬಾಯ್ಸ್ ಕೆಲಸಕ್ಕೆ ಪಾರ್ಟ್ ಟೈಂ/ಫುಲ್ ಟೈಮ್ ಬೇಕಾಗಿದ್ದಾರೆ. 18 ವರ್ಷ ಮೇಲ್ಪಟ್ಟ ಅನುಭವವುಳ್ಳವರು.
ಮಣಿಕಂಠ ಏಜೆನ್ಸೀಸ್
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಸೈಟ್ ಮಾರಾಟಕ್ಕಿದೆ**
ಉತ್ತರಾಭಿಮುಖ
29.5 x70=2065 feet
ಎಸ್.ಎಸ್. ಲೇಔಟ್, ಬಿ ಬ್ಲಾಕ್, ಇಂಡೋರ್ ಸ್ಟೇಡಿಯಂ ಹಿಂಭಾಗ
74119 19668

**ಜನ್ಮಾಂತರ ಆತ್ಮ ಚಿಕಿತ್ಸೆ**
ಬಿಪಿ, ಶುಗರ್, ಡಿಪ್ರೆಶನ್, ಮೈಗ್ರೇನ್, ಕ್ಯಾನ್ಸರ್, ಕಿಡ್ನಿ ತೊಂದರೆ, ಅಸ್ತಮಾ, ಸೋರಿಯಾಸಿಸ್, ಡ್ರಗ್ಸ್ ಮುಂತಾದ ದುಶ್ಚಟಗಳು, ಗ್ರಹದೋಷ, ನಾಗದೋಷ, ಮಾಟ ಮಂತ್ರ, ಭೂತ ಪ್ರೇತಗಳ ಭಯ ಹಾಗೂ ಹಿಂದಿನ ಜನ್ಮಗಳ ದೋಷಗಳ ಸಂಪೂರ್ಣ ನಿವಾರಣೆಗಾಗಿ
(ವ್ಯಕ್ತಿ ಎಷ್ಟೇ ದೂರದಲ್ಲಿದ್ದರೂ ಡಿಸ್ಟೆನ್ಸ್ ಹೀಲಿಂಗ್ ಮಾಡುತ್ತೇವೆ)
80733 42011

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
ಆನಗೋಡು ಸಮೀಪ NH-48ರಲ್ಲಿ ಇರುವ ಬಿಪಿಸಿಎಲ್ ಪೆಟ್ರೋಲ್ ಬಂಕ್‌ನ 20 ಕೆಎಲ್ HAZARD ಇರುವ ಟ್ಯಾಂಕರ್ ಲಾರಿ ಚಾಲಕರು ಬೇಕಾಗಿದ್ದಾರೆ.
ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸಿ.
90082 28222, 99001 42052

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಸೈಟ್ ಮಾರಾಟಕ್ಕಿದೆ**
ಹಳೆ ಕುಂದುವಾಡದ ಸರ್ಕಾರಿ ಹಿರಿಯ ಪ್ರಾರ್ಥಮಿಕ ಶಾಲೆ ಹಿಂಭಾಗ, ಪೂರ್ವಾಭಿಮುಖ ಕಾರ್ನರ್ ಸೈಟ್ # 4081/34, ಅಳತೆ : 40x50
97400 96577

**ಮನೆ ಬಾಡಿಗೆಗೆ ಇದೆ**
ಬೋರ್ ಮತ್ತು ನಲ್ಲಿ ನೀರಿನ ಸೌಕರ್ಯವಿರುವ 2 ಬೆಡ್ ರೂಂವುಳ್ಳ ಸುಸಜ್ಜಿತವಾದ ಮೊದಲನೇ ಮಹಡಿಯಲ್ಲಿರುವ ಮನೆ ಬಾಡಿಗೆಗೆ ಇದೆ. "ಈರಮ್ಮ ನಿಲಯ "MCC 'A' ಬ್ಲಾಕ್, 4ನೇ ಮುಖ್ಯರಸ್ತೆ, ಹಳೇ ಗುರು ಸ್ಕ್ಯಾನಿಂಗ್ ಪಕ್ಕ, ದಾವಣಗೆರೆ. ವಿಚಾರಿಸಿ
98868 25228
98866 53398

# ಜಿಲ್ಲೆಯ ವಿವಿಧೆಡೆ ಇಂದು ವೈಕುಂಠ ಏಕಾದಶಿ ಉತ್ಸವ

## ಎಂ.ಸಿ.ಸಿ. 'ಬಿ' ಬ್ಲಾಕ್



ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿರುವ ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವೈಕುಂಠ ಏಕಾದಶಿ ಮಹೋತ್ಸವ ನಡೆಯಲಿದೆ. ಮುಂಜಾನೆ 6ರಿಂದ ರಾತ್ರಿ 10 ರವರೆಗೆ ಶ್ರೀ ಸ್ವಾಮಿಯ ಅಖಂಡ ದರ್ಶನ ಮತ್ತು ಸರ್ವ ಭಕ್ತಾದಿಗಳಿಗೆ ತೀರ್ಥ ಪ್ರಸಾದ ವಿನಿಯೋಗವಿರುತ್ತದೆ ಎಂದು ದೇವಸ್ಥಾನದ ಪ್ರಧಾನ ಟ್ರಸ್ಟಿ ಎಂ.ಎನ್. ರಾಮ್‌ಮೋಹನ್ ತಿಳಿಸಿದ್ದಾರೆ.

## ಆರ್.ಜಿ.ಎಸ್. ನಗರ



ಆವರಗೆರೆಯ ರಿಲೈಯನ್ಸ್ ಪೆಟ್ರೋಲ್ ಬಂಕ್ ಹಿಂಭಾಗ ದಲ್ಲಿರುವ ಆರ್.ಜಿ.ಎಸ್. ನಗರದಲ್ಲಿರುವ ಶ್ರೀನಿವಾಸ ಮಂದಿರದಲ್ಲಿ ಬೆಳಿಗ್ಗೆಯಿಂದ ವಿಶೇಷ ಪಂಚಾಮೃತ ಅಭಿಷೇಕ, ಪುಷ್ಪಾಲಂಕಾರ, ವಿಶೇಷ ಪೂಜೆ ಕಾರ್ಯಕ್ರಮ ಗಳನ್ನು ಏರ್ಪಡಿ ಸಲಾಗಿದೆ. ನಂತರ ಉತ್ತರ ವೈಕುಂಠ ದ್ವಾರದಿಂದ ಸ್ವಾಮಿ ಯ ದರ್ಶನ, ಪ್ರಸಾದ ನಡೆಯಲಿದೆ ಎಂದು ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಆರ್.ಜಿ.ಶ್ರೀನಿವಾಸ ಮೂರ್ತಿ ತಿಳಿಸಿದ್ದಾರೆ.

## ಯರಗುಂಟೆ



ದಾವಣಗೆರೆ ಸಮೀಪದ ಯರಗುಂಟೆ ಶ್ರೀ ಲಕ್ಷ್ಮೀ ವೆಂಕಟೇಶ್ವರ ಬಡಾವಣೆಯಲ್ಲಿರುವ ಶ್ರೀ ಲಕ್ಷ್ಮೀ ಪದ್ಮಾವತಿ ವೆಂಕಟೇಶ್ವರ ದೇವಸ್ಥಾನದಲ್ಲಿ 8ನೇ ವರ್ಷದ ವೈಕುಂಠ ಏಕಾದಶಿ ಕಾರ್ಯಕ್ರಮ ನಡೆಯಲಿದೆ.

ಬೆಳಿಗ್ಗೆ 6 ರಿಂದ ಮಹಾಗಣಪತಿ ಪೂಜೆ, ಪುಣ್ಯಾಹವಾಚನ, ವೈಕುಂಠ ದ್ವಾರ ಪೂಜೆ ಹಾಗೂ ಶಿಲಾ ವಿಗ್ರಹಗಳಿಗೆ ಅಭಿಷೇಕ, ಕಲ್ಯಾಣೋತ್ಸವ ಮತ್ತು ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ ಎಂದು ಶ್ರೀ ಲಕ್ಷ್ಮೀ ಪದ್ಮಾವತಿ ವೆಂಕಟೇಶ್ವರ ಟ್ರಸ್ಟ್‌ನ ಡಿ.ಎನ್. ಬಾಲಸುಬ್ರಹ್ಮಣ್ಯ ತಿಳಿಸಿದ್ದಾರೆ.

## ಬಾಲಾಜಿ ನಗರ



ದಾವಣಗೆರೆಯ ಬಾಲಾಜಿ ನಗರದ ಕುಂದುವಾಡ ಕೆರೆ ಬಳಿಯ ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನದಲ್ಲಿರುವ ಶ್ರೀ ವೆಂಕಟೇಶ್ವರ ಸ್ವಾಮಿ ದೇವಾಲಯದಲ್ಲಿ ಬೆಳಿಗ್ಗೆ 6 ರಿಂದ ಸ್ವಾಮಿಗೆ ಅಭಿಷೇಕ, ವಿಶೇಷ ಪುಷ್ಪಾಲಂಕಾರ, ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

## ಭಾನುವಳ್ಳಿ



ಮಲೇಬೆನ್ನೂರು ಸಮೀಪದ ಭಾನುವಳ್ಳಿ ಗ್ರಾಮದ ಆರಾಧ್ಯ ದೈವ ಶ್ರೀ ಲಕ್ಷ್ಮಿ ನಾರಾಯಣ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಹಾಗೂ ದ್ವಿತೀಯ ಬಾರಿಗೆ ತಿರುಕಲ್ಯಾಣ ಮಹೋತ್ಸವವನ್ನು ಹಮ್ಮಿಕೊಳ್ಳಲಾಗಿದೆ. ಅಂದು ಸಂಜೆ 6 ಗಂಟೆಯಿಂದ ಗ್ರಾಮದಲ್ಲಿ ಶ್ರೀ ದೇವಿ ಭೂ ದೇವಿ ಹಾಗೂ ಶ್ರೀಮನ್ನಾರಾಯಣ ಸ್ವಾಮಿಯ ಪಲ್ಲಕ್ಕಿ ಉತ್ಸವ ಚಾಂಡಿ ಮೇಳ ಸೇರಿದಂತೆ ವಿವಿಧ ಕಲಾಮೇಳಗಳೊಂದಿಗೆ ನಡೆಯಲಿದೆ.

## ಚನ್ನಗಿರಿ - ವೆಂಕಟೇಶ್ವರಪುರ



ಚನ್ನಗಿರಿ ತಾಲ್ಲೂಕು ಶ್ರೀ ವೆಂಕಟೇಶ್ವರ ಪುರದಲ್ಲಿ ಶ್ರೀದೇವಿ, ಭೂದೇವಿ ಸಹಿತ ಶ್ರೀ ವೆಂಕಟೇಶ್ವರ ಸ್ವಾಮಿ ದಿವ್ಯ ಸಾನ್ನಿಧ್ಯದಲ್ಲಿ ಬೆಳಗಿನ ಜಾವ 3.30 ರಿಂದ ಉತ್ತರ ದ್ವಾರ ದರ್ಶನ, ವಿಶೇಷ ಪಂಚಾಮೃತ ಅಭಿಷೇಕ, ದಿವ್ಯ ವಜ್ರ ಖಚಿತ ಆಭರಣ ಅಲಂಕಾರ ಸೇವೆಯನ್ನು ನಡೆಸಲಾಗುತ್ತದೆ.


ಬೆಳಿಗ್ಗೆ 8ರಿಂದ ಸಂಜೆ 8 ರವರೆಗೂ ನಿರಂತರವಾಗಿ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣವನ್ನು ಆಯೋಜಿಸಲಾಗಿದೆ ಎಂದು ದೇವಸ್ಥಾನದ ಅರ್ಚಕ ಅಪ್ಪಾಜಿ ವರಪ್ರಸಾದ್ ಶರ್ಮ ತಿಳಿಸಿದ್ದಾರೆ.

## ಯರವನಾಗ್ತಿಹಳ್ಳಿ ಕ್ಯಾಂಪ್



ದಾವಣಗೆರೆ ತಾಲ್ಲೂಕಿನ ಲೋಕಿಕೆರೆ ರಸ್ತೆಯಲ್ಲಿರುವ ಯರವನಾಗ್ತಿಹಳ್ಳಿ ಕ್ಯಾಂಪ್‌ನಲ್ಲಿರುವ ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವೈಕುಂಠ ಏಕಾದಶಿ ನಡೆಯಲಿದೆ. ಮುಂಜಾನೆ 3 ರಿಂದ ವಿಶೇಷ ಪಂಚಾಮೃತ ಅಭಿಷೇಕ, ಪುಷ್ಪಾಲಂಕಾರ, ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ನಂತರ ಬೆಳಿಗ್ಗೆ 7 ರಿಂದ ಉತ್ತರ ವೈಕುಂಠ ದ್ವಾರದಿಂದ ಸ್ವಾಮಿಯ ದರ್ಶನ ನಡೆಯಲಿದೆ.

## ಲೋಕಿಕೆರೆ



ದಾವಣಗೆರೆ ತಾಲ್ಲೂಕು ಲೋಕಿಕೆರೆಯ ತ್ರಿಕೂಟಾಚಲ ದೇವಸ್ಥಾನದಲ್ಲಿ ಬೆಳಿಗ್ಗೆ 5 ಗಂಟೆಯಿಂದ ರಾತ್ರಿ 11ರವರೆಗೆ ನಿರಂತರವಾಗಿ ಶ್ರೀ ವೆಂಕಟರಮಣ ಸ್ವಾಮಿಯ ವೈಕುಂಠ ಏಕಾದಶಿ ಕಾರ್ಯಕ್ರಮ ನಡೆಯಲಿದೆ.

ಶ್ರೀ ಲಕ್ಷ್ಮಿ ವೆಂಕಟರಮಣ ಸ್ವಾಮಿಗೆ ಭಕ್ತಾದಿಗಳಿಂದ ಒಂದು ಲಕ್ಷದ ಒಂದು ತುಳಸಿ ದಳದ ಪತ್ರೆಯನ್ನು ಅರ್ಪಿಸುವ ವ್ಯವಸ್ಥೆಯನ್ನು ಮಾಡಲಾಗಿದೆ.

## ರಾಣೇಬೆನ್ನೂರು



ಮೆಡ್ಲೇರಿ ರಸ್ತೆ ವಾಗೀಶ ನಗರದ ಹತ್ತನೇ ಕ್ರಾಸ್‌ನಲ್ಲಿರುವ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಬೆಳಿಗ್ಗೆ ಮಹಾಭಿಷೇಕ, ಅಲಂಕಾರ, ನೈವೇದ್ಯ ನಂತರ ವೇದಮಂತ್ರ ಹಾಗೂ ನಗರ ಪ್ರದಕ್ಷಿಣೆ, ವೈಕುಂಠ ಮಂಟಪದಲ್ಲಿ ಭೂಸಹಿತ ಶ್ರೀನಿವಾಸನ ಪ್ರತಿಷ್ಠಾಪನೆ ನಡೆಯುವುದು. ಸಂಜೆ ನಾದಸ್ವರ ಮತ್ತು ಭಜನಾ ಮಂಡಳಿಗಳಿಂದ ಸಂಗೀತ ಸೇವೆ ನಂತರ ವಿಷ್ಣು ಸಹಸ್ರ ನಾಮ ಕಾರ್ಯಕ್ರಮವಿರುತ್ತದೆ.

## ಗೊಲ್ಲರಹಳ್ಳಿ



ದಾವಣಗೆರೆ ಸಮೀಪದ ಗೊಲ್ಲರಹಳ್ಳಿ ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ಶ್ರೀದೇವಿ ಭೂದೇವಿ ದೇವಸ್ಥಾನದಲ್ಲಿ ಇಂದು ಶುಕ್ರವಾರ ವೈಕುಂಠ ಏಕಾದಶಿಯ ವಿಶೇಷ ಪೂಜೆ ನೆರವೇರಿಸಲಾಗುವುದು ಎಂದು ಮುಖಂಡ ಬಿ.ಟಿ. ಸಿದ್ದಪ್ಪ ತಿಳಿಸಿದ್ದಾರೆ.

# ರಾಜ್ಯಮಟ್ಟದ ಯುವಜನ ಮಹೋತ್ಸವದಲ್ಲಿ ಜನಮನ ಸೆಳೆದ ಕೈವೈಸಿ ಅಭಿಯಾನ



ದಾವಣಗೆರೆ, ಜ. 9 - ನಗರದ ಬಾಪೂಜಿ ಎಂಬಿಎ ಮೈದಾನದಲ್ಲಿ ಕಳೆದ ವಾರ ನಡೆದ ರಾಜ್ಯಮಟ್ಟದ ಯುವಜನ ಮಹೋತ್ಸವದಲ್ಲಿ ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಪರಿಕಲ್ಪನೆಯಡಿ ಮೂಡಿಬಂದ ಸಂವಿಧಾನದ ಅರಿವಿನ ಕೈವೈಸಿ ಅಭಿಯಾನ ಯುವಜನತೆ ಹಾಗೂ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು.

ಯುವಜನ ಮಹೋತ್ಸವದಲ್ಲಿ ಸಂವಿಧಾನ ತಿಳಿಯಿರಿ ಅಭಿಯಾನ ವಿಶೇಷ ರೀತಿಯಲ್ಲಿ ಅನಾವರಣಗೊಂಡಿತ್ತು. ಈ ಅಭಿಯಾನಕ್ಕೆ ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಚಾಲನೆ ನೀಡಿ ವೀಕ್ಷಿಸಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಕಾರ್ಯವೈಖರಿಗೆ ಮೆಚ್ಚುಗೆ ಸೂಚಿಸಿದರು.

ಅಭಿಯಾನದಲ್ಲಿ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರು ರಚಿಸಿದ ನಮ್ಮ ಸಂವಿಧಾನದ ಬಗ್ಗೆ ಸಮಗ್ರ ಮಾಹಿತಿ ಹಾಗೂ ಸಂವಿಧಾನದ ಪೀಠಿಕೆ ಅದರಲ್ಲೂ ಸ್ಥಳದಲ್ಲೇ ಸಂವಿಧಾನದ ಪೀಠಿಕೆ ತಯಾರಿಸಿದ್ದು ಎಲ್ಲರ ಗಮನ ಸೆಳೆಯಿತು.

**ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಪರಿಕಲ್ಪನೆಯಡಿ ಮೂಡಿಬಂದ ಸಂವಿಧಾನದ ಅರಿವಿನ ಕೈವೈಸಿ ಅಭಿಯಾನಕ್ಕೆ ಯುವಜನತೆ ಹಾಗೂ ಸಾರ್ವಜನಿಕರ ಮೆಚ್ಚುಗೆ**

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸ್ವತಃ ಸಂವಿಧಾನ ಪೀಠಿಕೆ ತಯಾರಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಭಾರತದ ಸಂವಿಧಾನವು ದೇಶದ ಕಾನೂನುಗಳು, ಆಡಳಿತ ಮತ್ತು ನಾಗರಿಕರ ಹಕ್ಕುಗಳನ್ನು ವ್ಯಾಖ್ಯಾನಿಸುವ ಅತ್ಯುನ್ನತ ಕಾನೂನು ಚೌಕಟ್ಟಾಗಿದೆ. ಜನವರಿ 26, 1950 ರಂದು ಸಂವಿಧಾನವನ್ನು ಅಳವಡಿಸಿಕೊಳ್ಳಲಾಯಿತು. ಭಾರತ ಪ್ರಜಾಪ್ರಭುತ್ವದ ಬೆನ್ನೆಲುಬು ನಮ್ಮ ಸಂವಿಧಾನ. ಸರ್ಕಾರದ ಅಧಿಕಾರಗಳು ಮತ್ತು ರಾಜ್ಯದ ಜವಾಬ್ದಾರಿಗಳನ್ನು ಸಂವಿಧಾನ ವಿವರಿಸುತ್ತದೆ. 'ನಾವು ಭಾರತದ ಜನರು' ಎಂದು ಪ್ರಾರಂಭವಾಗುವ ಪೀಠಿಕೆಯು ರಾಷ್ಟ್ರದ ಮೌಲ್ಯಗಳು ಮತ್ತು ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ.

ಇದು ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಒತ್ತಿಹೇಳುತ್ತದೆ-ಭಾರತದ ಪ್ರಜಾಸತ್ತಾತ್ಮಕ ಅಡಿಪಾಯವನ್ನು ಎತ್ತಿಹಿಡಿಯುವ, ನ್ಯಾಯಯುತ, ಮುಕ್ತ ಮತ್ತು ಏಕೀಕೃತ ಸಮಾಜವನ್ನು ಖಾತ್ರಿಪಡಿಸುವ ಪ್ರಮುಖ ತತ್ವಗಳಾಗಿವೆ ಎಂದು ಸಂಸದರು ವಿವರಿಸಿದರು.

ಈ ಅಭಿಯಾನ ಮೂಲಕ ವಿದ್ಯಾರ್ಥಿಗಳು ಯುವಜನರು ಹಾಗೂ ಸಾರ್ವಜನಿಕರಲ್ಲಿ ನಮ್ಮ ಸಂವಿಧಾನದ ಸಮಗ್ರ ಮಾಹಿತಿ ತಿಳಿದುಕೊಳ್ಳಲು ಸಹಕಾರಿಯಾಯಿತು.

# ಬಳ್ಳಾರಿಯಲ್ಲಿ 'ಜೀನ್ಸ್ ಪಾರ್ಕ್' ಸ್ಥಾಪನೆಗೆ ಕೆಐಎಡಿಬಿ ನಿರ್ಧಾರ

ಬೆಂಗಳೂರು,ಜ.9- ಭಾರತ್ ಜೋಡೋ ಯಾತ್ರೆ ವೇಳೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೀಡಿದ ಭರವಸೆಯಂತೆ ರಾಜ್ಯದಲ್ಲಿ ಕೆಐಎಡಿಬಿಯಿಂದ 'ಜೀನ್ಸ್ ಪಾರ್ಕ್' ಸ್ಥಾಪಿಸಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ.

ಬಾಂಗ್ಲಾದೇಶದಲ್ಲಿನ ರಾಜಕೀಯ ಅಸ್ಥಿರತೆ ಯಿಂದಾಗಿ ಅಲ್ಲಿನ ಜೀನ್ಸ್ ಉಡುಪು ತಯಾರಿಕೆ ಉದ್ಯಮ ನೆಲ ಕಚ್ಚಿದ್ದು, ಹೂಡಿಕೆದಾರರು ಮತ್ತು ರಫ್ತುದಾರರ ಗಮನ ಸೆಳೆಯಲು ರಾಜ್ಯದಲ್ಲಿ ಜೀನ್ಸ್ ಪಾರ್ಕ್ ಸ್ಥಾಪನೆಗೆ ಮುಂದಾಗಿದ್ದೇವೆ.

ಕೇಂದ್ರ ಜವಳಿ ಇಲಾಖೆಯಲ್ಲಿ ಜೀನ್ಸ್ ತಯಾರಿಕಾ ಘಟಕಗಳಿಗೆ ರಿಯಾಯಿತಿ ವ್ಯವಸ್ಥೆ ಇದ್ದರೆ ಆ ಸೌಲಭ್ಯವನ್ನೂ ಕೊಡಿಸಲಾಗುವುದು, ಈ ಸಂಬಂಧ ಜವಳಿ ಸಚಿವರ ಜತೆ ಸಭೆ ನಡೆಸಲಾಗುವುದು ಎಂದಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಬಾಂಗ್ಲಾದಲ್ಲಿನ ವಿದೇಶಿ ಹೂಡಿಕೆದಾರರ ಗಮನ ಬಳ್ಳಾರಿಯ ಜೀನ್ಸ್ ತಯಾರಿಕೆ ಉದ್ಯಮದ ಮೇಲೆ ಹರಿದಿದೆ, ಈ ಸದಾವಕಾಶ ಪರಿವರ್ತಿಸಿಕೊಂಡು ಹೂಡಿಕೆ ಆಕರ್ಷಿಸಲಿದ್ದೇವೆ ಎಂದರು. ಜೀನ್ಸ್ ಪಾರ್ಕ್ ಸ್ಥಾಪನೆಗೆ ಬಳ್ಳಾರಿಯ ಸಂಜೀವರಾಯನ ಕೋಟೆಯಲ್ಲಿ 154 ಎಕರೆ ಸ್ವಾಧೀನಪಡಿಸಿಕೊಳ್ಳಲಾಗಿದೆ, ಇಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದ ಜೀನ್ಸ್ ಉಡುಪು ತಯಾರಿಕಾ ಕಂಪನಿಗಳು ಆರಂಭವಾಗುವಂತೆ ಗಮನ ಹರಿಸಲಾಗುವುದು.


ಬಳ್ಳಾರಿಯಲ್ಲಿ ಪ್ರಸ್ತುತ 500ಕ್ಕೂ ಹೆಚ್ಚು ಜೀನ್ಸ್ ಉಡುಪು ತಯಾರಿಕಾ ಘಟಕಗಳಿವೆ, ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಾವಿರಾರು ಉದ್ಯೋಗಗಳನ್ನು ಸೃಷ್ಟಿಸಿವೆ, ಇದಕ್ಕೆ ವ್ಯವಸ್ಥಿತ ರೂಪ ನೀಡಿ, ರಫ್ತು ಕೇಂದ್ರಿತವಾಗಿಯೂ ಬೆಳೆಸುವುದು ಕೈಗಾರಿಕಾ ಇಲಾಖೆಯ ಚಿಂತನೆಯಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಕಳೆದ ಬಜೆಟ್‌ನಲ್ಲಿ ಬಳ್ಳಾರಿಯಲ್ಲಿ ಜೀನ್ಸ್ ಪಾರ್ಕ್ ಸ್ಥಾಪಿಸುವ ಘೋಷಣೆ ಮಾಡಿದ್ದು, ಅಸಂಘಟಿತ ಜೀನ್ಸ್ ಉದ್ಯಮಕ್ಕೆ ಸಂಘಟಿತ ರೂಪ ನೀಡಿ, ಅಂತಾರಾಷ್ಟ್ರೀಯ ದರ್ಜೆಗೆ ಏರಿಸುವುದು ಇದರ ಉದ್ದೇಶ.

ಬಳ್ಳಾರಿ ಜೀನ್ಸ್ ಪಾರ್ಕ್ ಸ್ಥಾಪನೆಯಿಂದ ಪ್ರಾದೇಶಿಕ ಆರ್ಥಿಕತೆಗೆ ಚೈತನ್ಯ ಬರಲಿದೆ, ಅಲ್ಲದೆ, ನಾವೀನ್ಯತೆ, ಉಡುಪು ಕ್ಷೇತ್ರಕ್ಕೆ ಸಂಬಂಧಿಸಿದ ಸಂಶೋಧನೆಗಳಿಗೆ ಆದ್ಯತೆ ಸಿಗಲಿದೆ.

ಜೀನ್ಸ್ ಉಡುಪು ಯುವಜನಾಂಗಕ್ಕೆ ಅಚ್ಚುಮೆಚ್ಚಿನದಾಗಿದ್ದು, ರಾಜ್ಯದ ಉದ್ಯಮಸ್ನೇಹಿ ಕೈಗಾರಿಕಾ ನೀತಿಯಡಿ ಬಳ್ಳಾರಿ ಸುತ್ತಮುತ್ತಲಿನ ಜೀನ್ಸ್ ಉಡುಪು ತಯಾರಿಕಾ ಘಟಕಗಳಿಗೆ ಹೆಚ್ಚಿನ ನೆರವು ನೀಡುವ ಮೂಲಕ ಜೀನ್ಸ್ ಮಾರುಕಟ್ಟೆ ಗುರಿಯಾಗಿಟ್ಟುಕೊಂಡು ಮುಂದುವರೆಯಲಾಗುವುದು ಎಂದರು.

# ನಗರದ ಮಹಾರಾಜ ಪೇಟೆ ವಿಠ್ಠಲ ಮಂದಿರದಲ್ಲಿ ಇಂದು ವೈಕುಂಠ ಏಕಾದಶಿ



ಮಹಾರಾಜ ಪೇಟೆಯ ಶ್ರೀ ಭಾವಸಾರ ಕ್ಷತ್ರಿಯ ಸಮಾಜದ ವಿಠ್ಠಲ ಮಂದಿರದಲ್ಲಿ ಇಂದು ವೈಕುಂಠ ಮುಕೋಟಿ ಏಕಾದಶಿ ನಿಮಿತ್ಯ ಬೆಳಿಗ್ಗೆ 5 ಗಂಟೆಗೆ ಅಭಿಷೇಕ, ಪೂಜೆ, ಕಾಕಡಾರತಿ, ಭಜನೆ, ಶ್ರೀ ಜ್ಞಾನೇಶ್ವರಿ (ಭಗವದ್ಗೀತೆ) ಪಾರಾಯಣ, ಹರಿಪಾಠ ನಂತರ ತೀರ್ಥ ಪ್ರಸಾದ ಏರ್ಪಡಿಸಲಾಗಿದೆ.

ವಿಶೇಷವಾಗಿ ಶ್ರೀ ವಿಠ್ಠಲ ರುಖುಮಾಯಿ ದೇವರ ಪಾದ ದರ್ಶನ ಏರ್ಪಡಿಸಲಾಗಿದೆ ಮತ್ತು ಸಂಜೆ 5 ಗಂಟೆಗೆ ಕಲಾವತಿ ಮಹಿಳಾ ಮಂಡಳಿ ಇವರಿಂದ ಭಜನೆ, ಧಾರವಾಡದ ಶ್ರೀ ಹ.ಭ.ಪ. ವಿಠ್ಠಲ ಕಾಟೆ ಇವರಿಂದ ರಾತ್ರಿ 7.30ರಿಂದ ಕೀರ್ತನೆ, 9ಕ್ಕೆ ಮಹಾ ಮಂಗಳಾರತಿ, ಫಲಹಾರ ನಡೆಯಲಿದೆ ಎಂದು ಭಜನಾ ಮಂಡಳಿ ಅಧ್ಯಕ್ಷ ನಿಂಗಸ್ವಾಮಿ ರಾವ್ ಖಮಿತ್ಕರ್ ತಿಳಿಸಿದ್ದಾರೆ.

# ಮಲೇಬೆನ್ನೂರಿನಲ್ಲಿ ಇಂದು ಸಭೆ

ಮಲೇಬೆನ್ನೂರು ಪುರಸಭೆಯ ಸಭಾ ಭವನದಲ್ಲಿ ಇಂದು ಶುಕ್ರವಾರ ಬೆಳಿಗ್ಗೆ 11 ಗಂಟೆಗೆ 2025-26ನೇ ಸಾಲಿನ ಆಯ-ವ್ಯಯ ತಯಾರಿಸುವ ಸಲುವಾಗಿ ಪಟ್ಟಣದ ನಾಗರಿಕರ ಸಂಘ-ಸಂಸ್ಥೆಗಳ ಪದಾ ಧಿಕಾರಿಗಳ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ ಎಂದು ಪುರಸಭೆ ಮುಖ್ಯಾ ಧಿಕಾರಿ ಭಜಕ್ಕನವರ್ ತಿಳಿಸಿದ್ದಾರೆ.

# ಪ್ರಾಣ ಉಳಿಸಿದ ಗೃಹ ರಕ್ಷಕ ಶಶಿಧರ



ದಾವಣಗೆರೆ, ಜ.9- ಇಲ್ಲಿನ ರೈಲ್ವೆ ನಿಲ್ದಾಣದಲ್ಲಿ ಚಲಿಸುತ್ತಿರುವ ರೈಲು ಏರಲು ಪ್ರಯತ್ನಿಸಿ ಆಯತಪ್ಪಿ ಬಿದ್ದು, ಅಪಾಯಕ್ಕೆ ಸಿಲುಕಿದ ಪ್ರಯಾಣಿಕರೊಬ್ಬರನ್ನು ಗೃಹರಕ್ಷಕ ಕೆ.ಎಸ್. ಶಶಿಧರ ಅವರು ಜೀವದ ಹಂಗು ತೊರೆದು ರಕ್ಷಿಸಿದ್ದಾರೆ.

ಗೃಹರಕ್ಷಕ ನ್ಯಾಮತಿ ಘಟಕದ ಶಶಿಧರ ಅವರ ಸಮಯ ಪ್ರಜ್ಞೆಯಿಂದ ಅನಾಹುತವೊಂದು ತಪ್ಪಿದ್ದು, ಇವರ ಕಾರ್ಯವನ್ನು ಗುರುತಿಸಿದ ಜಿಲ್ಲಾ ಗೃಹರಕ್ಷಕ ದಳವು ಅವರನ್ನು ಸನ್ಮಾನಿಸಿ, ಗೌರವಿಸಿದೆ.

ಈ ವೇಳೆ ಕಮಾಂಡೆಂಟ್ ಡಾ. ಎಸ್.ಹೆಚ್. ಸುಜಿತ್ ಕುಮಾರ್, ನ್ಯಾಮತಿ ಘಟಕಾಧಿಕಾರಿ ಎಂ. ರಾಘವೇಂದ್ರ, ದಾವಣಗೆರೆ ಘಟಕಾಧಿಕಾರಿ ಕೆ.ಎಸ್. ಅಮರೇಶ್, ಅಧಿಕಾರಿಗಳು ಹಾಗೂ ಸಿಬ್ಬಂದಿ ಇದ್ದರು.

## ಓದುಗರ ಪತ್ರ

# ಓ ಮೈ ಗಾಡ್ !!! ನೀನಿದ್ದಿದ್ದರೆ...?

ಪ್ರಸಿದ್ಧ ತಿರುಪತಿ ದೇವಸ್ಥಾನದಲ್ಲಿ ವೈಕುಂಠ ದ್ವಾರ ದರ್ಶನದ ಟೋಕನ್ ಪಡೆಯುವಾಗ ಕಾಲ್ತುಳಿತದಿಂದ ಆರು ಮಂದಿ ಭಕ್ತರು ಮೃತಪಟ್ಟಿರುವುದು ಶೋಚನೀಯ. ಪ್ರಾಣಕ್ಕಿಂತ ಅಮೂಲ್ಯವಾದದ್ದು ಯಾವುದೂ ಇಲ್ಲ. ಮುಗ್ದ ಜನರು ಮೂಢನಂಬಿಕೆಯಿಂದಾಗಿ ಅಮೂಲ್ಯ ಜೀವ ಹಾನಿ ಮಾಡಿಕೊಂಡಿರುವುದು ವಿಷಾಧನೀಯ. ಭಕ್ತಿಯೆಂದರೆ ಪ್ರೀತಿ, ಕರುಣೆ, ದಯೆ, ಎಲ್ಲರನ್ನು ಪ್ರೀತಿಸುವುದು ಎಂದರ್ಥ. ಆದರೆ ಹಲವು ವರ್ಷ ಬದುಕಬೇಕಾದವರು ಕಾಲ್ತುಳಿತದಲ್ಲಿ ನಿನ್ನೆಯೇ ವೈಕುಂಠ ಸೇರಿಕೊಂಡರು. ಇಂತಹ ಮೌಢ್ಯ ಅಗತ್ಯವೇ?

**ತಿರುಪತಿಯಲ್ಲಿ ಕಾಲ್ತುಳಿತಕ್ಕೆ ಆರು ಜನರ ಸಾವು**

ಜನ ದುರಾಸೆಯ ಒತ್ತಡಗಳಲ್ಲಿ ವಿವೇಚನಾ ಶಕ್ತಿಯನ್ನೇ ಕಳೆದುಕೊಳ್ಳು ತ್ತಿದ್ದಾರೆ. ಇದಕ್ಕೆ ಯಾರು ಜವಾಬ್ದಾರರು? ಮೌಢ್ಯವೇ? ಅಲ್ಲಿನ ಆಡಳಿತ ವ್ಯವಸ್ಥೆಯೇ? ತಿರುಪತಿ ತಿಮ್ಮಪ್ಪನೇ? ಯಾರ ಮೇಲೆ ಮೊಕದ್ದಮೆ ಹಾಕುವುದು. ಪುಷ್ಪ-2 ಚಲನಚಿತ್ರ ನೋಡಲು ಹೋಗಿ ಕಾಲ್ತುಳಿತದಲ್ಲಿ ಅಭಿಮಾನಿಯೊಬ್ಬ ಮೃತಪಟ್ಟಾಗ ನಾಯಕ ಅಲ್ಲು ಅರ್ಜುನ್ ಕಾರಣವೆಂದು ಬಂಧನಕ್ಕೊಳಪಡಿಸಲಾಗಿತ್ತು. ತಿರುಪತಿ ತಿಮ್ಮಪ್ಪನ ದರ್ಶನಕ್ಕೆಂದು ಹೋದಾಗ ಕಾಲ್ತುಳಿತದ ದುರಂತದಲ್ಲಿ ಯಾರನ್ನು ದೂರುವುದು ?

ಪ್ರಸಿದ್ಧ ಹಿಂದಿ ಚಲನಚಿತ್ರಗಳಾದ ಓ ಮೈ ಗಾಡ್ ಮತ್ತು ಅಮೀರ್ ಖಾನ್‌ನ ಪಿ.ಕೆ., ಕನ್ನಡದ ಮುಕುಂದ ಮುರಾರಿ ಚಲನ ಚಿತ್ರಗಳು ಪ್ರಸ್ತುತ ಭಾರತದಲ್ಲಿ ನಡೆಯುತ್ತಿರುವ ಭಕ್ತಿಯ ಹೆಸರಿನ ಶೋಷಣೆಯನ್ನು ಚೆನ್ನಾಗಿ ಚಿತ್ರಿಸಿವೆ.

ವೈಕುಂಠದ ದಿವಸ ಮಾತ್ರ ಒಳ್ಳೆಯದೇ ? ಇನ್ನುಳಿದ 364 ದಿನಗಳು ಕೆಟ್ಟವೆ ? ದೇವರು ಸರ್ವಾಂತರ್ಯಾಮಿಯಾಗಿರುವಾಗ ದೇವಸ್ಥಾನಗಳ ಕಲ್ಲು ಗುಡಿಗಳಲ್ಲಿ ಮಾತ್ರ ಇರುತ್ತಾನೆಯೇ? ಸರ್ವಶಕ್ತನಾಗಿದ್ದರೆ ತನ್ನದೇ ಭಕ್ತರನ್ನು ಏಕೆ ಉಳಿಸಿಕೊಳ್ಳಲಿಲ್ಲ.

ಇತ್ತೀಚಿನ ದಿನಗಳಲ್ಲಿ ತೀರ್ಥಯಾತ್ರೆ ಹೋದವರು ಅಪಘಾತದಿಂದ ಸಾವನ್ನಪ್ಪುವುದನ್ನು ದಿನಬೆಳಗಾದರೆ ಮಾಧ್ಯಮಗಳಲ್ಲಿ ಕೇಳುತ್ತಿರುತ್ತೇವೆ. ಗುಡಿಯಲ್ಲಿ ಮಾತ್ರ ದೇವರಿಲ್ಲ. ದೇವರು ಎಲ್ಲೆಡೆ ಇದ್ದಾನೆ.

ಕಲ್ಲು ದೇವರು ದೇವರಲ್ಲ,
ಮಣ್ಣು ದೇವರು ದೇವರಲ್ಲ,
ಮರದ ದೇವರು ದೇವರಲ್ಲ,
ಪಂಚಲೋಹದಲ್ಲಿ ಮಾಡಿದ ದೇವರು ದೇವರಲ್ಲ,
ಸೇತುಬಂಧ, ರಾಮೇಶ್ವರ, ಕಾಶಿ, ಗೋಕರ್ಣ, ಕೇದಾರ ಮೊದಲಾದ
ಪುಣ್ಯತೀರ್ಥ ಕ್ಷೇತ್ರಗಳಲ್ಲಿಹ ದೇವರು ದೇವರಲ್ಲ.
'ತನ್ನ ತಾನಾರೆಂದು ತಿಳಿದೆಡೆ ತಾನೇ ದೇವನೋಡಾ' ಅಪ್ರಮಾಣ ಕೂಡಲಸಂಗಮದೇವ

ಎಂಬ ವಚನ ಅರಿತು ವಿಚಾರಶಕ್ತಿ ಬೆಳೆಸಿಕೊಂಡ ಮಾನವರು ಮೌಢ್ಯವನ್ನು ಬಿಟ್ಟು ಶ್ರಮ, ಶ್ರದ್ದೆಯಿಂದ ತಮ್ಮ ಕಾಯಕವನ್ನು ಮಾಡಿ ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳಬೇಕು. ನಾನೇ ದೇವರು ಎಂದುಕೊಂಡು ಎಲ್ಲರನ್ನೂ ಪ್ರೀತಿಸಿ, ತಮ್ಮ ಆರೋಗ್ಯ, ಆನಂದ, ಶಾಂತಿ, ನೆಮ್ಮದಿ ಕಾಪಾಡಿಕೊಳ್ಳಬೇಕು.

**-ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ.**


**ಕಮರ್ಷಿಯಲ್ ಕಾಂಪ್ಲೆಕ್ಸ್ ಬಾಡಿಗೆಗೆ ಇದೆ**



ಎ.ವಿ.ಕೆ. ಕಾಲೇಜ್ ರಸ್ತೆ, ಶ್ರೀರಾಮ ಪಾರ್ಕ್ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ.

ನೆಲ ಮಹಡಿ, 1ನೇ ಮಹಡಿ, 2ನೇ ಮಹಡಿ ಬಾಡಿಗೆಗಿವೆ

ಫೋನ್ : 99640 13041


**ಕಕ್ಕರಗೊಳ್ಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.,**

**ಚುನಾವಣಾ ಸೂಚನಾ ಪತ್ರ**


ಮೇಲ್ಕಂಡ ವಿಷಯದ ರೀತ್ಯಾ ನಮ್ಮ ಸಂಘದ ಮುಂದಿನ 5 ಸಹಕಾರಿ ವರ್ಷಗಳ ಅವಧಿಗೆ ಆಡಳಿತ ಮಂಡಳಿ ಸದಸ್ಯರುಗಳಿಗೆ **ದಿನಾಂಕ 25.01.2025 ರಂದು ಚುನಾವಣೆ** ನಡೆಯುತ್ತಿದ್ದು, ನಾಮಪತ್ರ ಸಲ್ಲಿಸುವ **ದಿನಾಂಕ 10.01.2025** ರಿಂದ ಪ್ರಾರಂಭವಾಗಿ **ದಿನಾಂಕ 17.01.2025** ಕ್ಕೆ ಕೊನೆಗೊಳ್ಳಲಿದ್ದು, ಆಸಕ್ತ ಅರ್ಹ ಸದಸ್ಯರುಗಳಿಗೆ ಈಗಾಗಲೇ ಚುನಾವಣಾ ನೋಟೀಸ್ ತಲುಪಿಸಿದ್ದು, ಒಂದು ವೇಳೆ ಚುನಾವಣಾ ನೋಟೀಸ್ ತಲುಪದಿದ್ದವರು ನೇರವಾಗಿ ಸಂಘದ ಕಛೇರಿಯನ್ನು ಸಂಪರ್ಕಿಸಲು ಈ ಮೂಲಕ ಕೋರುತ್ತಿದ್ದು, ಹಾಗೂ ಎಲ್ಲಾ ಅರ್ಹ ಸದಸ್ಯರು **ದಿನಾಂಕ 25.01.2025**ರ ಶನಿವಾರ ಕಡ್ಡಾಯವಾಗಿ ಮತದಾನದಲ್ಲಿ ಪಾಲ್ಗೊಳ್ಳುವಂತೆ ಕೋರಲಾಗಿದೆ.

ರಿಟರ್ನಿಂಗ್ ಅಧಿಕಾರಿ ಪರವಾಗಿ,
**ಸಹಿ/- ಮುಖ್ಯ ಕಾರ್ಯ ನಿರ್ವಹಣಾಧಿಕಾರಿ**
**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.,**
**ಕಕ್ಕರಗೊಳ್ಳ, ದಾವಣಗೆರೆ ತಾ|| - ಜಿ||**


ಅತಿ ಮಾರಾಟ ಮತ್ತು ದೊಡ್ಡ ರಿಯಾಯ್ತಿಗಳು
ಇಂದಿನಿಂದ ಪ್ರಾರಂಭ
ಹೊಸ ವಿನ್ಯಾಸ ಮತ್ತು ಸಂಗ್ರಹಗಳೊಂದಿಗೆ

FURNITURE & HOME INTERIOR EXPO

10 ಶುಕ್ರ 11 ಶನಿ 12 ಶನಿ 13 ಭಾನು ಜನವರಿ 2025
ಸಮಯ ಬೆಳಿಗ್ಗೆ 10.30 ರಿಂದ ಸಂಜೆ 8.30ರವರೆಗೆ
ಬಾಪೂಜಿ ಬ್ಯಾಂಕ್ ಸಮುದಾಯ ಭವನ, ಶಾಮನೂರು, ದಾವಣಗೆರೆ.



ವಿಶಾಲವಾದ ಕಾರ್ ಪಾರ್ಕಿಂಗ್ | ಉಚಿತ ಪ್ರವೇಶ | ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ 91 96111 76669 / 98866 65857


# ಪ್ರಧಾನಿ ಮೋದಿಯ 'ಮನ್‌ಕಿ ಬಾತ್' ಕೇಳುವುದನ್ನು ಕಡ್ಡಾಯ ಮಾಡಿದ ಗೋವಾ ರಾಜ್ಯ ಸರ್ಕಾರ

ಪಣಜಿ, ಜ.9- ಪ್ರಧಾನಿ ನರೇಂದ್ರ ಮೋದಿ ಅವರು ತಿಂಗಳಿಗೊಮ್ಮೆ ನಡೆಸಿಕೊಡುವ ರೇಡಿಯೊ ಕಾರ್ಯಕ್ರಮ 'ಮನ್ ಕಿ ಬಾತ್' ಕೇಳುವುದನ್ನು ಗೋವಾದಲ್ಲಿರುವ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಗುರುವಾರ ಕಡ್ಡಾಯಗೊಳಿಸಿದೆ.

ಈ ಕುರಿತು ಸುತ್ತೋಲೆ ಹೊರಡಿಸಿರುವ ಸರ್ಕಾರ, 'ಕಾರ್ಯಕ್ರಮದಲ್ಲಿ ಉತ್ತಮ ಆಡಳಿತ ಕುರಿತ ಹಲವು ಸ್ಫೂರ್ತಿದಾಯಕ ಮಾತುಗಳಿರುತ್ತವೆ. ಅವುಗಳ ಅನುಷ್ಠಾನದಿಂದ ಸಮಾಜದಲ್ಲಿ ಆಮೂಲಾಗ್ರ ಬದಲಾವಣೆ ತರಲು ಸಾಧ್ಯ' ಎಂದು ಹೇಳಿದೆ. ಈ ವಿಷಯ ಕುರಿತು ಮಾಹಿತಿ ಹಂಚಿಕೊಂಡಿರುವ ಗೋವಾ ಮುಖ್ಯಮಂತ್ರಿ ಪ್ರಮೋದ ಸಾವಂತ್, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಉತ್ತಮ ಆಡಳಿತ ಕುರಿತು ಸಾರ್ವಜನಿಕರ ಗಮನ ಸೆಳೆಯುವ ಹೊಸ ಬಗೆಯ ಆಲೋಚನೆಗಳನ್ನು ಮನ್ ಕಿ ಬಾತ್‌ನಲ್ಲಿ ಹಂಚಿಕೊಳ್ಳುತ್ತಾರೆ. ಇವುಗಳನ್ನು ಅನುಷ್ಠಾನಗೊಳಿಸುವು ದರಿಂದ ಪ್ರತಿಯೊಬ್ಬ ವ್ಯಕ್ತಿ ಹಾಗೂ ಸಾಮೂಹಿಕ ಪ್ರಯತ್ನದಿಂದ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯವಿದೆ ಎಂದು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಹೇಳಿದ್ದಾರೆ.

ಕಾರ್ಯಕ್ರಮದಲ್ಲಿ ಪ್ರಸಾರವಾಗುವ ಹಲವು ಉತ್ತಮ ನೈಜ ಕಥೆ ಹಾಗೂ ಪದ್ಧತಿಗಳು ನಮಗೆ ಸ್ಫೂರ್ತಿಯಾಗಲಿವೆ. ಇವುಗಳು ದೇಶದಲ್ಲಿ ಸಕಾರಾತ್ಮಕ ಬದಲಾವಣೆ ತರಲಿವೆ. ಇದರಿಂದ ಸರ್ಕಾರದಲ್ಲೂ ಬದಲಾವಣೆ ತರಲು ಸಾಧ್ಯವಿದೆ. ಆ ಮೂಲಕ ಗೋವಾದಲ್ಲಿ ಜನರಿಗೆ ಲಭ್ಯವಾಗುವ ಸೇವೆಗಳು ಉತ್ತಮ ಗುಣಮಟ್ಟದ್ದಾಗಿರಲಿದೆ ಎಂದಿದ್ದಾರೆ.

# ರಾಣೇಬೆನ್ನೂರಿನಲ್ಲಿ 'ಕರ್ನಾಟಕ ವೈಭವ'



ರಾಣೇಬೆನ್ನೂರು,ಜ.8- ಬರುವ ಫೆಬ್ರವರಿ 7, 8 ಮತ್ತು 9 ರಂದು ನಗರದಲ್ಲಿ ನಡೆಯುವ 'ಕರ್ನಾಟಕ ವೈಭವ' ಕಾರ್ಯಕ್ರಮಕ್ಕೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಜೋಗತಿ ಮಂಜಮ್ಮ, ಹಿನ್ನೆಲೆ ಗಾಯಕರಾದ ಸಂಗೀತಾ ಕಟ್ಟಿ ಮುಂತಾದವರು ಆಗಮಿಸುವರು.

## ನಾಲ್ಕನೇ ವರ್ಷದ ಪುಣ್ಯಸ್ಮರಣೆ



ದಾವಣಗೆರೆ ಎಂಸಿಸಿ. 'ಎ' ಬ್ಲಾಕ್, 3ನೇ ಮೇನ್ # 2597/1A, ವಾಸಿ

**ದಿ|| ಶ್ರೀಮತಿ ನಿರ್ಮಲಮ್ಮನವರು**

ಅಧ್ಯಕ್ಷರು, ಶ್ರೀ ಲಕ್ಷ್ಮಿನಾರಾಯಣ ಭೋವಿ ವಿದ್ಯಾಸಂಸ್ಥೆ (ರಿ) ಗೊಲ್ಲರಹಳ್ಳಿ

*ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು...*

*ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...*

ಪತಿ : **ಜಿ.ಟಿ. ತಿಮ್ಮಪ್ಪ,** ಕಾರ್ಯದರ್ಶಿಗಳು ಪುತ್ರ: **ಜಿ.ಟಿ. ಹರೀಶ್**
ಪುತ್ರಿಯರಾದ: **ಶ್ರೀಮತಿ ಜಿ.ಟಿ. ಲಕ್ಷ್ಮಿ, ಶ್ರೀಮತಿ ಜಿ.ಟಿ. ಲತಾ ಕು|| ಜಿ.ಟಿ. ಸೌಮ್ಯ ಮತ್ತು ಅಳಿಯಂದಿರು ಮೊಮ್ಮಕ್ಕಳು, ಗೊಲ್ಲರಹಳ್ಳಿ ಬಂಧು – ಮಿತ್ರರು**

ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು
ಶ್ರೀ ಆಂಜನೇಯ ಪ್ರೌಢಶಾಲೆ, ಯರಗುಂಟೆ, ಹೊಸ ಬಡಾವಣೆ, ದಾವಣಗೆರೆ.

## ಶ್ರೀಮತಿ ಆರ್. ಸುವರ್ಣಮ್ಮ ನಿಧನ



ಚನ್ನಗಿರಿ ತಾಲ್ಲೂಕು ಹಿರೇಗಂಗೂರು ಗ್ರಾಮದ ವಾಸಿ
ಮೋಹನ್ ಕುಮಾರ್ (BSNL Rtd.) ಇವರ ಧರ್ಮಪತ್ನಿ ಶ್ರೀಮತಿ

**ಆರ್. ಸುವರ್ಣಮ್ಮ**

ಇವರು ದಿನಾಂಕ 09.01.2025ರ ಗುರುವಾರ ಬೆಳಿಗ್ಗೆ 10.40ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 65 ವರ್ಷ ವಯಸ್ಸಾಗಿತ್ತು. ಪತಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10.01.2025ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಹಿರೇಗಂಗೂರು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬದವರು :** ದಿ. ಹಿರೇಗಂಗೂರು ಶ್ರೀ ಸೂರಪ್ಪ ಗೌಡರ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, AIBSNL, PWA ನಿವೃತ್ತರು, ದಾವಣಗೆರೆ, ಮೊ.94822 44044


# ಕಮ್ಮವಾರಿ ಸಂಘ (ರಿ.)

# 3617, ಕಾಕತೀಯ ನಗರ, ಹರಿಹರ ರಸ್ತೆ, ದಾವಣಗೆರೆ-06, ಮೊ. : 94482 94054

ದಿನಾಂಕ : 10.01.2025ನೇ ಶುಕ್ರವಾರ

ವೈಕುಂಠ (ಮುಕ್ಕೋಟಿ) ಏಕಾದಶಿ ಶುಭ ದಿನದಂದು ಬೆಳಿಗ್ಗೆ 7.00 ಗಂಟೆಗೆ

## ಸಾಮೂಹಿಕ ಶ್ರೀ ರಮಾಸಹಿತ ಸತ್ಯನಾರಾಯಣ ಸ್ವಾಮಿಯವರ ವ್ರತ ಮಹೋತ್ಸವ, ವಾರ್ಷಿಕ ಮಹಾಸಭೆ

ಮಧ್ಯಾಹ್ನ 12.00ಕ್ಕೆ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಪ್ರತಿಭಾ ಪುರಸ್ಕಾರ



ದಿನಾಂಕ : 11.1.2025 ರಿಂದ 13.1.2025ರವರೆಗೆ ಕಮ್ಮವಾರಿ ಸಂಘದ ಯುವ ಘಟಕದಿಂದ ಕ್ರಿಕೆಟ್ ಕ್ರೀಡಾಕೂಟವನ್ನು ದಾವಣಗೆರೆಯ ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿರುತ್ತದೆ.



**ಶ್ರೀ ಮೇಕಾ ಮುರಳಿಕೃಷ್ಣ**
ಅಧ್ಯಕ್ಷರು, ಕಮ್ಮ ಸಮಾಜ ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆ ರೆಡ್ಡಿ ಜನಸಂಘ, ಚಿತ್ರದುರ್ಗ, ಮಾಜಿ ಅಧ್ಯಕ್ಷರು, ತಾ|| ಪಂಚಾಯತ್ ದಾವಣಗೆರೆ.

ಎಂ.ಟಿ. ರಾಜಾರಾವ್ ಗೌರವಾಧ್ಯಕ್ಷರು; ವೈಟ್ಲ ರಾಮಚಂದ್ರಶೇಖರ್ ಕಾರ್ಯದರ್ಶಿಗಳು; ವೆಂಕಟೇಶ್ವರರಾವ್ ಬೊಜ್ಜಾ, ಖಜಾಂಚಿ; ಮದ್ದಿಪೂಡಿ ಸತ್ಯನಾರಾಯಣ ಉಪಾಧ್ಯಕ್ಷರು; ಕೊರಿಪಲ್ಲಿ ಪ್ರಸಾದ್ ಉಪಾಧ್ಯಕ್ಷರು; ಸಿ.ವಿ. ಅರುಣ್‌ಕುಮಾರ್ ಸಹ ಕಾರ್ಯದರ್ಶಿ; ವಿ.ಪಿ. ಕೃಷ್ಣಮೂರ್ತಿ ನಿರ್ದೇಶಕರು; ಚಲುಕೂರಿ ಶ್ರೀರಾಮಮೂರ್ತಿ ನಿರ್ದೇಶಕರು; ಎನ್. ಸತ್ಯಕುಮಾರ್ ನಿರ್ದೇಶಕರು

ಚಲುಕೂರಿ ನಾಗೇಶ್ವರರಾವ್ ನಿರ್ದೇಶಕರು; ವಟ್ಟಿಕೂಟಿ ರಾಮರಾವ್ ನಿರ್ದೇಶಕರು; ತಾಳ್ಳೂರಿ ಅಂಜಿಬಾಬು ನಿರ್ದೇಶಕರು; ಎಸ್.ಕೆ. ವೆಂಕಟಸತ್ಯನಾರಾಯಣ ನಿರ್ದೇಶಕರು; ದೇವಳ್ಳ ಬಾಪೇಶ್ವರರಾವ್ ನಿರ್ದೇಶಕರು; ಕೇತಿನೀಡಿ ಕೃಷ್ಣಾರಾವ್ ನಿರ್ದೇಶಕರು; ಗೂಡವರ್ತಿ ಕೃಷ್ಣಮೂರ್ತಿ ನಿರ್ದೇಶಕರು; ಕೇತಿನೀಡಿ ಸತ್ಯನಾರಾಯಣ ನಿರ್ದೇಶಕರು; ತಾಡಪನೇನಿ ರಾಮಮೋಹನ ರಾವ್, ನಿರ್ದೇಶಕರು


ನೆಕ್ಕಂಟಿ ನರಸಿಂಹಮೂರ್ತಿ ನಿರ್ದೇಶಕರು; ಉಂಡವಲ್ಲಿ ಲಕ್ಷ್ಮಿನಾರಾಯಣ ಅಧ್ಯಕ್ಷರು, ಸಲಹಾ ಸಮಿತಿ; ಚಲುಕೂರಿ ಕೃಷ್ಣಮೂರ್ತಿ ಅಧ್ಯಕ್ಷರು, ಕಟ್ಟಡ ಸಮಿತಿ; ವಂಟಿಪಲ್ಲಿ ಮುರುಳಿಕೃಷ್ಣ ಅಧ್ಯಕ್ಷರು, ವಿದ್ಯಾ ಸಮಿತಿ; ವಲ್ಲೂರಿ ವೆಂಕಟರಾವ್ ಅಧ್ಯಕ್ಷರು, ಲೆ. ಪರಿಶೋಧನಾ ಸಮಿತಿ; ವೈಟ್ಲ ರಂಜಿತ್ ಅಧ್ಯಕ್ಷರು, ಯುವ ಕಮ್ಮ ಸಮಿತಿ

ಸ್ವಾಗತ ಕೋರುವವರು : ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಕಾರ್ಯಕಾರಿ ಮಂಡಳಿ, ಕಮ್ಮವಾರಿ ಸಂಘ (ರಿ.) ದಾವಣಗೆರೆ.





# ಆತ್ಮೀಯ ಸಹೋದರರಿಗೆ ಜನ್ಮ ದಿನದ ಶುಭಾಶಯಗಳು







ಎಸ್.ಆರ್. ಪಾಂಡು

ಎಸ್.ಪಿ. ಟ್ರಾನ್ಸ್‌ಪೋರ್ಟ್ಸ್ ಅಂಡ್ ಕನ್‌ಸ್ಟ್ರಕ್ಷನ್ಸ್ ಮತ್ತು ಶಿವ ಸ್ಟೋನ್ ಕ್ರಷರ್ ಮಾಲೀಕರೂ, ಗುತ್ತಿಗೆದಾರರೂ, ನಮ್ಮ ಆತ್ಮೀಯ ಸಹೋದರರೂ ಆದ

**ಶ್ರೀ ಸುರೇಶ್ ಪೈ** ಅವರಿಗೂ

ಹಾಗೂ ಕಾಂಗ್ರೆಸ್ ಮುಖಂಡರಾದ

**ಶ್ರೀ ಎಸ್.ಆರ್. ಪಾಂಡು**

**ಮುಕ್ತೇನಹಳ್ಳಿ** ಅವರುಗಳಿಗೆ

ಜನ್ಮದಿನದ ಹಾರ್ದಿಕ ಶುಭಾಶಯಗಳು. ಶ್ರೀಯುತರು ನೂರಾರು ಕಾಲ ಸುಖ-ಸಂತೋಷದಿಂದ ಬಾಳಲಿ ಎಂದು ಶುಭ ಹಾರೈಸುತ್ತೇವೆ.



ಎಸ್. ಮಂಜುನಾಥ್



**ಎಸ್.ಜಿ. ವೇದಮೂರ್ತಿ ಶಾಮನೂರು**
ಜಿಲ್ಲಾ ಉಪಾಧ್ಯಕ್ಷರು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹಾಗೂ ಕಾಂಗ್ರೆಸ್ ಮುಖಂಡರು, ಶಾಮನೂರು



**ಅನ್ವರ್ ಬಾಷಾ**
ಪ್ರಥಮ ದರ್ಜೆ ಗುತ್ತಿಗೆದಾರರು, ತುರ್ಚಘಟ್ಟ


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas